# ಅಧ್ಯಾಯ 2:
# ಶಾಲಾ ಶಿಕ್ಷಣ ಕುರಿತಾದ ಕಾರ್ಯಾತ್ಮಕವಾದ ದೃಷ್ಟಿಕೋನ

## ಕಾರ್ಯಾತ್ಮಕವಾದ

ಕಾರ್ಯಾತ್ಮಕವಾದ (functionalism))ವು ನಮ್ಮ ಸುತ್ತಲಿನ ಸಾಮಾಜಿಕ ಘಟನೆಗಳು ಮತ್ತು ಸಾಂಸ್ಥಿಕ ರಚನೆಗಳನ್ನು ಯಾವ ರೀತಿಯಾಗಿ ನೋಡಬೇಕು ಎಂಬ ಬಗ್ಗೆ ಒಂದು ಸಾಮಾನ್ಯ ಸೈದ್ಧಾಂತಿಕ ದೃಷ್ಟಿಕೋನವನ್ನು ಒದಗಿಸುತ್ತದೆ. ಈ ದೃಷ್ಟಿಕೋನವು ಮಾನವಶಾಸ್ತ್ರ (ಸಂಸ್ಕೃತಿಯ ಅಧ್ಯಯನ) ಮತ್ತು ಸಮಾಜಶಾಸ್ತ್ರ (ಸಮಾಜದ ಅಧ್ಯಯನ) ಕ್ಷೇತ್ರಗಳಲ್ಲಿ ವಿಶೇಷವಾದ ಪ್ರಾಮುಖ್ಯತೆಯನ್ನು ಪಡೆದಿದೆ. ಆದಾಗ್ಯೂ, ಇದರ ಮೂಲಭೂತ ಒಳನೋಟ ಜೀವವಿಜ್ಞಾನ ಕ್ಷೇತ್ರದಿಂದ ಬಂದುದ್ದಾಗಿದೆ. ಒಂದು ಜೈವಿಕ ಜೀವಿಯ ವಿವಿಧ ಅಂಗಾಂಗ ವ್ಯವಸ್ಥೆಗಳು ವಿಭಿನ್ನ ಬದುಕುಳಿಯುವ ಕಾರ್ಯಗಳನ್ನು ಪೂರೈಸುತ್ತವೆ ಎಂಬುದನ್ನು ಕಾರ್ಯಾತ್ಮಕವಾದಿಗಳು ಗಮನಿಸುತ್ತಾರೆ. ಉದಾಹರಣೆಗೆ, ಸಸ್ತನಿಗಳಲ್ಲಿ ಹೊಟ್ಟೆ, ಸಣ್ಣ ಕರುಳು, ಮತ್ತು ಇತರ ಅಂಗಾಂಗಗಳು ಆಹಾರದ ಜೀರ್ಣಕ್ರಿಯೆಯ ಕಾರ್ಯವನ್ನು ನಿರ್ವಹಿಸಿದರೆ, ಹೃದಯವು ದೇಹಕ್ಕೆ ರಕ್ತಪೂರೈಕೆಯ ಕಾರ್ಯವನ್ನು ನಿರ್ವಹಿಸಿ, ಶ್ವಾಸಕೋಶಗಳಿಂದ ದೇಹದ ಎಲ್ಲಾ ಭಾಗಗಳಿಗೆ ಆಮ್ಲಜನಕ ಪೂರೈಕೆಯಾಗುವಂತೆ ನೋಡಿಕೊಳ್ಳುತ್ತದೆ. ಇನ್ನು ಕೆಲವು ಅಂಗಾಂಗಗಳು ದೇಹದಿಂದ ತ್ಯಾಜ್ಯವನ್ನು ವಿಸರ್ಜಿಸುವ ಕಾರ್ಯನಿರ್ವಹಿಸಿದರೆ, ಇನ್ನು ಕೆಲವು ಸಂತಾನೋತ್ಪತ್ತಿಯ ಪ್ರಕ್ರಿಯೆಯ ಕಾರ್ಯವನ್ನು ನಿರ್ವಹಿಸುತ್ತವೆ. ಇತರ ಜೀವಜಾತಿಗಳು, ಉದಾಹರಣೆಗೆ ಮೀನು - ಇದರ ಅಂಗ ರಚನೆಯು ಸಸ್ತನಿಗಳಿಗಿಂತ ತಕ್ಕಮಟ್ಟಿಗೆ ಭಿನ್ನವಾಗಿದ್ದರೂ, ಅವು ಕೂಡ ಮೀನಿನ ಉಳಿವಿಗೆ ಅಗತ್ಯವಾದ ಅದೇ ಕಾರ್ಯವನ್ನು ನಿರ್ವಹಿಸುತ್ತವೆ. ಈ ಒಳನೋಟವನ್ನು ಜೀವವಿಜ್ಞಾನದ ನೆಲೆಯಿಂದ ಸಾಮಾಜಿಕ ನೆಲೆಗೆ ಅನ್ವಯಿಸುವ ಕಾರ್ಯಾತ್ಮಕವಾದಿಗಳು, ಒಂದು ನಿರ್ದಿಷ್ಟ ಸಾಮಾಜಿಕ ಆಚರಣೆ ಅಥವಾ ಒಂದು ಸಾಂಸ್ಥಿಕ ರಚನೆಯನ್ನು ನಾವು ಅರ್ಥಮಾಡಿಕೊಳ್ಳಬೇಕೆಂದರೆ, ಅದು ಒಟ್ಟಂದದಲ್ಲಿ ಯಾವ ರೀತಿಯಲ್ಲಿ ಒಂದು ಸಾಮಾಜಿಕ ವ್ಯವಸ್ಥೆಯ ಉಳಿವಿಗಾಗಿ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ನಾವು ಪರಿಗಣಿಸಬೇಕು, ಎಂದು ವಾದಿಸುತ್ತಾರೆ. ಉದಾಹರಣೆಗೆ, ಪ್ರಸ್ತುತ ಸಮಾಜದಲ್ಲಿ ಕಡ್ಡಾಯ, ಸಾರ್ವಜನಿಕ ಶಿಕ್ಷಣದ ಪಾತ್ರ ಏನು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕೆಂದರೆ, ಅದು ಪೂರೈಸುವ ಸಾಮಾಜಿಕ ಅಗತ್ಯಗಳನ್ನು ಮತ್ತು ಆ ಅಗತ್ಯಗಳನ್ನು ಪೂರೈಸುವ ಕಾರ್ಯರೀತಿಯನ್ನು ನಾವು ಕಂಡುಕೊಳ್ಳಬೇಕಾಗಿದೆ. ಕಾರ್ಯಾತ್ಮಕವಾದಿಗಳು ನಮಗೆ ಭಿನ್ನವಾಗಿ ಕಾಣಬಹುದಾದ ಪ್ರಶ್ನೆಗಳಿಗೆ ಕೂಡ ಇದೇ ತೆರನಾದ ವಿವರಣೆಗಳನ್ನು ಕೊಡುತ್ತಾರೆ. ಉದಾಹರಣೆಗೆ, ಕೆಲವು ಜೀವಜಾತಿಗಳಲ್ಲಿ ಆಗಷ್ಟೇ ಹುಟ್ಟಿದ ಮರಿಗಳನ್ನು ಸಾಯಿಸುವ ಅಭ್ಯಾಸ ಇರುವುದು ಏಕೆ? ವಿಭಿನ್ನ ಜಾತಿಯ ಮಿಂಚುಹುಳುಗಳು ವಿಭಿನ್ನ ಬೆಳಕಿನ ಸಂಕೇತಗಳನ್ನು ಏಕೆ ಪ್ರದರ್ಶಿಸುತ್ತವೆ? ವೈದ್ಯರಿಗೆ ಇತರ ವೃತ್ತಿಪರರಿಗಿಂತ ಹೆಚ್ಚಿನ ಸಂಬಳ ಏಕೆ? ಶಾಲೆಗಳಲ್ಲಿ ಪ್ರಮಾಣೀಕರಿಸಲಾದ ಬುದ್ಧಿಪರೀಕ್ಷೆಗಳನ್ನು ಬಳಸುವುದು ಏಕೆ? ಇತ್ಯಾದಿ. ಈ ರೀತಿಯ ಪ್ರತಿ ಪ್ರಶ್ನೆಯನ್ನು ಕೂಡ, ಅದು ಯಾವ ರೀತಿಯಾಗಿ ಆ ಜೀವಿಯ ಬದುಕುಳಿಯುವಿಕೆಯ ಮೂಲಭೂತ ಅಗತ್ಯವನ್ನು ಪೂರೈಸುತ್ತದೆ ಎಂಬುದರ ಆಧಾರದ ಮೇಲೆ ಕಾರ್ಯಾತ್ಮಕವಾದಿಗಳು ವಿವರಿಸುವ ಪ್ರಯತ್ನ ಮಾಡುತ್ತಾರೆ ಎನ್ನುವುದು ಇಲ್ಲಿನ ಮುಖ್ಯ ಅಂಶ.

ಹೇಗೆ ಒಂದು ಜೀವಿಯ ವಿವಿಧ ಅಂಗಾಂಗಗಳು ಮತ್ತು ವರ್ತನೆಗಳನ್ನು ಅದರ ಉಳಿವಿಗೆ ಬೇಕಿರುವ ಅಗತ್ಯತೆಗಳನ್ನು ಪೂರೈಸಲು ಅವು ನೆರವಾಗುವ ಕಾರ್ಯಗಳಾಗಿ ಅರ್ಥಮಾಡಿಕೊಳ್ಳಬಹುದೋ ಹಾಗೆಯೇ ಒಂದು

ಸಮಾಜದ ಆಚರಣೆಗಳು ಮತ್ತು ಸಾಂಸ್ಥಿಕ ರಚನೆಗಳನ್ನು ಅವು ಸಮಾಜದ ಕೆಲವು ಉಳಿವಿನ ಅಗತ್ಯತೆಗಳನ್ನು ಹೇಗೆ ಪೂರೈಸುತ್ತವೆ ಎಂಬ ಆಧಾರದ ಮೇಲೆ ವಿವರಿಸಬಹುದು ಎಂದು ಕಾರ್ಯಾತ್ಮಕವಾದಿಗಳು ವಾದಿಸುತ್ತಾರೆ. ವಿಭಿನ್ನ ಪರಿಸರಗಳು ವಿಭಿನ್ನ ಪ್ರತಿಕ್ರಿಯೆಗಳನ್ನು ಬೇಡುವುದರಿಂದ ಅಂತಹ ಅಗತ್ಯತೆಗಳನ್ನು ಪೂರೈಸುವ ರೀತಿಗಳು ಸಹ ಭಿನ್ನವಾಗಿರುತ್ತವೆ. ಆದಾಗ್ಯೂ, ಒಂದು ಸಾಮಾಜಿಕ ಸಂಸ್ಥೆ ಅಥವಾ ಆಚರಣೆಯ ಸಮರ್ಪಕ ಅರ್ಥೈಸುವಿಕೆಯು ಅದು ಯಾವ ಅಗತ್ಯವನ್ನು ಪೂರೈಸಲು ಕಾರ್ಯನಿರ್ವಹಿಸುತ್ತದೆ ಮತ್ತು ಅದನ್ನು ಪೂರೈಸುವ ಕಾರ್ಯರೀತಿಯ ಅರ್ಥೈಸುವಿಕೆಯಲ್ಲಿ ನೆಲೆಗೊಂಡಿರಬೇಕಾಗಿದೆ. ಹೀಗೆ, ಕಾರ್ಯಾತ್ಮಕವಾದಿಗಳು ಸಾಮಾಜಿಕ ಸಂಸ್ಥೆಗಳನ್ನು ಮತ್ತು ಆಚರಣೆಗಳನ್ನು ಒಟ್ಟಾರೆ ಸಾಮಾಜಿಕ ವ್ಯವಸ್ಥೆಯ ಅಳವಡಿಸುವಿಕೆ ಹಾಗೂ ಹೊಂದಾಣಿಕೆಗೆ ಅವುಗಳ ಕೊಡುಗೆಯ ಆಧಾರದ ಮೇಲೆ ಪರಿಗಣಿಸುವ ಪ್ರವೃತ್ತಿಯನ್ನು ಹೊಂದಿರುತ್ತಾರೆ.[1]

ನಮ್ಮ ಸಮಾಜದಲ್ಲಿ ವೈದ್ಯರು ಮತ್ತು ಶಿಕ್ಷಕರು - ಈ ಎರಡು ವೃತ್ತಿಗಳ ಆಯ್ಕೆ, ತರಬೇತಿ ಮತ್ತು ಪ್ರತಿಫಲದ ನಡುವಿನ ವ್ಯತ್ಯಾಸಗಳನ್ನು ಗಮನಿಸಿ. ಒಂದು ಕಾರ್ಯಾತ್ಮಕವಾದಿ ದೃಷ್ಟಿಕೋನದ ಪ್ರಕಾರ ನಮ್ಮ ಉಳಿವಿಗೆ ಈ ಎರಡೂ ವೃತ್ತಿಪರರ ಅಗತ್ಯತೆ ಇದೆ, ಆದರೆ ವೈದ್ಯರು ಮತ್ತು ಶಿಕ್ಷಕರ ನಡುವೆ ಆದಾಯ, ಸ್ಥಾನಮಾನ ಮತ್ತು ಗೌರವಕ್ಕೆ ಸಂಬಂಧಿಸಿದಂತೆ ಕಾಣುವ ದೊಡ್ಡ ವ್ಯತ್ಯಾಸಗಳನ್ನು ನಾವು ಹೇಗೆ ಅರ್ಥ ಮಾಡಿಕೊಳ್ಳುವುದು? ಒಂದು ಕಾರ್ಯಾತ್ಮಕವಾದಿ ವಿವರಣೆಯು ಹೀಗಿರಬಹುದು: ಒಂದು ಸಮಾಜದಲ್ಲಿ ಬಹುತೇಕ ಮಂದಿ ನಿರ್ವಹಿಸಬಹುದಾದ ಹಲವು ಕೆಲಸಗಳಿರುವುದರಿಂದ ಜನರಿಗೆ ಆ ಕೆಲಸಗಳನ್ನು ಕೈಗೊಳ್ಳಲು ಅಧಿಕ ವೇತನವನ್ನು ನೀಡಿ ಉತ್ತೇಜಿಸಬೇಕಾದ ಅಗತ್ಯವಿಲ್ಲ. ಆದಾಗ್ಯೂ, ಒಂದು ಆಧುನಿಕ ಸಮಾಜದಲ್ಲಿ ಸಾಪೇಕ್ಷ ಕೆಲವೇ ಕೆಲವರ ವಿಶೇಷ ಪ್ರತಿಭೆಯು ಮಾತ್ರ ಪೂರೈಸಬಹುದಾದಂತಹ ಕೆಲವು ಅಗತ್ಯಗಳಿವೆ. ವೈದ್ಯ ವೃತ್ತಿಯು ಅಂತಹ ಒಂದು ವಿಶೇಷ ಪ್ರತಿಭೆಗಳಲ್ಲಿ ಒಂದಾಗಿದೆ, ಮತ್ತು ಈ ಪ್ರತಿಭೆಯ ಅಭಿವೃದ್ಧಿಯು ಹಲವು ವರ್ಷಗಳ ಶಿಕ್ಷಣ ಮತ್ತು ಕಠಿಣ ತರಬೇತಿಯನ್ನು ಬೇಡುತ್ತದೆ. ಆದ್ದರಿಂದ, ಪ್ರತಿಭಾವಂತರು ಈ ವಿಶೇಷ ತ್ಯಾಗವನ್ನು ಕೈಗೊಳ್ಳುವುದನ್ನು ಪ್ರೋತ್ಸಾಹಿಸಲೆಂದು ಸಮಾಜವು ಅಧಿಕ ಪ್ರೋತ್ಸಾಹಕಗಳನ್ನು ಒದಗಿಸುತ್ತದೆ. ಹೆಚ್ಚಿನ ಆದಾಯ ಮತ್ತು ಹೆಚ್ಚಿಸಿದ ಸ್ಥಾನಮಾನದಂತಹ ಪ್ರೋತ್ಸಾಹಕಗಳನ್ನು ಒದಗಿಸುವುದು ಮತ್ತು ಈ ವಿಶೇಷ ಅಗತ್ಯತೆಗಳನ್ನು ಪೂರೈಸುವುದನ್ನು ಖಚಿತಪಡಿಸುವುದು ಇವು ಸಮಾಜದ ವಿಧಾನಗಳಾಗಿವೆ. ಎಲ್ಲಿಯವರೆಗೆ ವೈದ್ಯರಾಗುವುದಕ್ಕಿಂತ ಶಿಕ್ಷಕರಾಗುವ ಪ್ರತಿಭೆಯನ್ನು ಹೊಂದಿರುವ ಜನರು ಬಹಳಷ್ಟು ಇರುತ್ತಾರೋ ಅಲ್ಲಿಯವರೆಗೆ ಅವರ ಆದಾಯ ಮತ್ತು ಸ್ಥಾನಮಾನದಲ್ಲಿ ಕೂಡ ವ್ಯತ್ಯಾಸ ಮುಂದುವರಿಯುತ್ತದೆ.

ಅದೇ ರೀತಿಯಲ್ಲಿ, ಎಲ್ಲಾ ಸಮಾಜಗಳೂ ತಮ್ಮ ಸದಸ್ಯರು ವಿವಿಧ ಕೆಲಸಗಳನ್ನು ನಿರ್ವಹಿಸುವುದನ್ನು ಬೇಡುತ್ತದೆ ಎಂದು ಕಾರ್ಯಾತ್ಮಕವಾದಿಗಳು ವಾದಿಸುತ್ತಾರೆ. ಸಮಾಜದಲ್ಲಿನ ಯಾವುದೇ ಕೆಲಸ, ಅದು ಎಷ್ಟೇ ಅಹಿತಕರವಾಗಿದ್ದರೂ, ಎಷ್ಟೇ ಶ್ರಮದಾಯಕವಾಗಿದ್ದರೂ ಅದು ಪೂರ್ಣಗೊಂಡಿರುವುದನ್ನು ಖಚಿತಪಡಿಸಲು ಆಯ್ಕೆ, ಸಾಮಾಜೀಕರಣ ಮತ್ತು ತರಬೇತಿ ಪ್ರಕ್ರಿಯೆಗಳ ಅಗತ್ಯವಿದೆ. ಸರಳ ಸಮಾಜಗಳಲ್ಲಿಯೂ ಕೂಡ ನಾವು ಈ ರೀತಿಯ ಪಾತ್ರ ವಿಂಗಡನೆಯನ್ನು ಕಾಣುತ್ತೇವೆ - ಕೆಲವರು ಬೇಟೆಯಾಡುತ್ತಾರೆ, ಇನ್ನು ಕೆಲವರು ಸಂಗ್ರಹಿಸುತ್ತಾರೆ, ಮತ್ತು ಇನ್ನು ಕೆಲವರು ಆಹಾರ ಸಿದ್ಧಪಡಿಸುತ್ತಾರೆ. ಆದಾಗ್ಯೂ, ಸರಳ ಸಮಾಜಗಳಲ್ಲಿ ಈ ಪಾತ್ರ ವಿಂಗಡನೆ ಅಷ್ಟು ಸ್ಫುಟವಾಗಿರುವುದಿಲ್ಲ ಮತ್ತು ಸಮಾಜಕ್ಕೆ ಒಬ್ಬ ಕೊಡುವ ಕೊಡುಗೆಯನ್ನು ಸಾಮಾನ್ಯವಾಗಿ ಇನ್ನಿತರರು ನೋಡಲು ಸಾಧ್ಯವಿರುತ್ತದೆ. ವಿವಿಧ ಪಾತ್ರಗಳನ್ನು ವಹಿಸುವ ವಿವಿಧ ಜನರ ಕೊಡುಗೆಗಳು ಎಲ್ಲರಿಗೂ ಗೋಚರವಾಗುವುದರಿಂದ ಮತ್ತು ಬುಡಕಟ್ಟು ಆಚರಣೆಗಳಲ್ಲಿ ಎಲ್ಲರೂ ಭಾಗವಹಿಸುವುದರಿಂದ, ಆ ಬುಡಕಟ್ಟು ಸಮಾಜಕ್ಕೆ ಸೇರಿದ ಎಲ್ಲರೂ ಒಂದೇ ರೀತಿಯ ಜೀವನ ಮೌಲ್ಯಗಳನ್ನು ಮತ್ತು ಸಂಜ್ಞಾನಾತ್ಮಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳುತ್ತಾರೆ; ಹೀಗೆ ಅವರ ಗುಂಪು ಒಗ್ಗಟ್ಟಿನ ಭಾವವನ್ನು ಉಳಿಸಿಕೊಳ್ಳಲಾಗುತ್ತದೆ.

ಕಾರ್ಯಾತ್ಮಕವಾದಿಗಳ ಪ್ರಕಾರ, ಜನರು ನಿರ್ವಹಿಸುವ ಕಾರ್ಯಗಳಿಗೆ ಸಂಬಂಧಿಸಿದಂತೆ ಇರುವ ಪಾತ್ರ ಭಿನ್ನತೆ (role differentiation) ಮತ್ತು ಸಾಮಾಜಿಕ ಒಗ್ಗಟ್ಟು ಸಾಮಾಜಿಕ ಜೀವನದ ಎರಡು ಮೂಲ ಅಗತ್ಯತೆಗಳು. ಸರಳ ಮತ್ತು ಆಧುನಿಕ ಸಮಾಜಗಳೆರಡರಲ್ಲೂ ಈ ಅಗತ್ಯತೆಗಳಿವೆ. ಸರಳ ಸಮಾಜಗಳಲ್ಲಿ ಕುಟುಂಬ ಮತ್ತು ಸಮುದಾಯದಲ್ಲಿ ದೊರೆಯುವ ಅನೌಪಚಾರಿಕ ಶಿಕ್ಷಣದ ಮೂಲಕ ಈ ಅಗತ್ಯತೆಗಳನ್ನು ಪೂರೈಸಿಕೊಳ್ಳಬಹುದಾಗಿದೆ, ಆದಾಗ್ಯೂ, ಸಂಕೀರ್ಣವಾದ, ತಲೆಮಾರಿನಿಂದ ತಲೆಮಾರಿಗೆ ಪಾತ್ರಗಳಲ್ಲಿ ಬದಲಾವಣೆಯಾಗುವ ಆಧುನಿಕ ಸಮಾಜಗಳಲ್ಲಿ, ಪಾತ್ರ ಭಿನ್ನತೆ ಮತ್ತು ಗುಂಪಿನ ಒಗ್ಗಟ್ಟು ಸಾಧಿಸಲು ಹಾಗೂ ಎಳೆಯ ಮಕ್ಕಳಿಗೆ ಶಿಕ್ಷಣವನ್ನು ಖಚಿತಪಡಿಸಲು ಹೆಚ್ಚಿನ ಔಪಚಾರಿಕ ವ್ಯವಸ್ಥೆಯ ಅಗತ್ಯವಿದೆ. ಈ ಉದ್ದೇಶ ಸಾಧನೆಗಾಗಿ ಆಧುನಿಕ ಸಮಾಜಗಳು ಸಾರ್ವತ್ರಿಕ, ಕಡ್ಡಾಯ, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಸ್ಥಾಪಿಸಿವೆ.

ಕಡ್ಡಾಯ ಶಿಕ್ಷಣವು ಹಳೆಯ ಅಪ್ರಯೋಜಕ ಅಭ್ಯಾಸಗಳು, ಧೋರಣೆಗಳು ಮತ್ತು ನಿಷ್ಠೆಗಳ ಬದಲಿಗೆ ಹೊಸ ಮತ್ತು ಹೆಚ್ಚು ಕಾರ್ಯಾತ್ಮಕ ಅಭ್ಯಾಸಗಳು, ಧೋರಣೆಗಳು ಮತ್ತು ನಿಷ್ಠೆಗಳನ್ನು ಕಲಿಸುವ ಆಶ್ವಾಸನೆ ನೀಡುತ್ತದೆ. ತಂತ್ರಜ್ಞಾನದ ನಿರಂತರ ವಿಸ್ತರಣೆಗೆ ಅಗತ್ಯವಾದ ಹೊಸ ಕೌಶಲಗಳ ಬೆಳವಣಿಗೆಯನ್ನು ಕೂಡ ಕಡ್ಡಾಯ ಶಿಕ್ಷಣ ಸಾಧ್ಯವಾಗಿಸುತ್ತದೆ. ಉದಾಹರಣೆಗೆ, ನಮ್ಮ ಸಮಾಜ ಮತ್ತು ಶಾಲೆಗಳಲ್ಲಿ ಕಂಪ್ಯೂಟರ್ ಬಳಕೆಯು ಯಾವೆಲ್ಲಾ ಬದಲಾವಣೆಗಳನ್ನು ತಂದಿದೆ ಎಂಬುದನ್ನು ಯೋಚಿಸಿ.

ಕಾರ್ಯಾತ್ಮಕವಾದಿಗಳ ದೃಷ್ಟಿಕೋನದ ಪ್ರಕಾರ, ಸಾರ್ವತ್ರಿಕ ಕಡ್ಡಾಯ ಶಿಕ್ಷಣವು ಕೈಗಾರಿಕಾ ಸಮಾಜದ ಅವಶ್ಯಕತೆಗಳೊಂದಿಗೆ ನಿಕಟ ಸಂಬಂಧ ಹೊಂದಿದೆ. ಶಾಲೆಗಳು ಸರಳ ಸಮಾಜಗಳಲ್ಲಿ ಕುಟುಂಬ, ಸಮುದಾಯ, ಅಥವಾ ಬುಡಕಟ್ಟಿನ ಮುಂದುವರೆಯುತ್ತಿರುವ ಚಟುವಟಿಕೆಯ ಮೂಲಕ ಅನೌಪಚಾರಿಕವಾಗಿ ನಿರ್ವಹಿಸುವಂತಹ ಮೂಲಭೂತ ಕೆಲಸಗಳನ್ನು ಔಪಚಾರಿಕವಾಗಿ ನಿರ್ವಹಿಸುತ್ತವೆ. ಉದಾಹರಣೆಗೆ, ಹೆಚ್ಚಿನ ಸಾಂಪ್ರದಾಯಿಕ ಸಮಾಜಗಳಲ್ಲಿ ಮಕ್ಕಳು ತಮ್ಮ ಪೋಷಕರು ಮತ್ತು ಇತರ ಹಿರಿಯರು ಮಾಡುವ ಕೆಲಸವನ್ನು ಗಮನಿಸುತ್ತಾ, ಹೆಚ್ಚು ಹೆಚ್ಚು ಜವಾಬ್ದಾರಿ ವಹಿಸಿಕೊಳ್ಳುತ್ತಾ ಆ ಕೆಲಸದಲ್ಲಿ ಭಾಗವಹಿಸಿ ಕೆಲಸ ಕಲಿಯುತ್ತಾರೆ. ಆಧುನಿಕ ಸಮಾಜಗಳಲ್ಲಿ ಮಕ್ಕಳಿಗೆ ತಮ್ಮ ಪೋಷಕರ ಕೆಲಸವನ್ನು ಗಮನಿಸುವ ಅವಕಾಶ ಅತಿ ಕಡಮೆ ಇದ್ದು ಶಾಲೆಗಳು ಈಗ ಅಗತ್ಯವಾದ ಕೌಶಲ ಮತ್ತು ಮನೋಧೋರಣೆಗಳನ್ನು ಕಲಿಸಬೇಕಾಗುತ್ತದೆ.

ಈ ಮೇಲಿನ ಅಂಶವು ಕಾರ್ಯಾತ್ಮಕವಾದದೊಂದಿಗೆ ಸಾಮಾನ್ಯವಾಗಿ ತಳಕು ಹಾಕಿಕೊಂಡಿರುವ ಇನ್ನೊಂದು ಅಂಶವಾದ 'ಹಂತ ಸಿದ್ಧಾಂತ' (stage theory) ದ ಕಡೆಗೆ ನಮ್ಮ ಗಮನ ಸೆಳೆಯುತ್ತದೆ. "ಬೆಳವಣಿಗೆ"ಯ ಪರಿಕಲ್ಪನೆಯನ್ನು ಸರಳ, ಸಾಂಪ್ರದಾಯಿಕ ಸಾಮಾಜಿಕ ರಚನೆಗಳಿಂದ ಹಿಡಿದು ಹೆಚ್ಚು ಸಂಕೀರ್ಣ, ಆಧುನಿಕ ರಚನೆಗಳ ಕಡೆಗಿನ ಬೆಳವಣಿಗೆಯ ತನಕ ವಿವರಿಸಲು ಇದನ್ನು ಬಳಸಲಾಗುತ್ತದೆ. ಈ ಹಂತ ಸಿದ್ಧಾಂತವನ್ನು ಒಪ್ಪಿಕೊಳ್ಳುವ ಕಾರ್ಯಾತ್ಮಕವಾದಿಗಳು, ಸಾಂಪ್ರದಾಯಿಕ ಸಮಾಜದಿಂದ ಆಧುನಿಕ ಸಮಾಜದ ಕಡೆಗಿನ ಬೆಳವಣಿಗೆಯನ್ನು ವಿವಿಧ ರೀತಿಯ ಕಾರ್ಯಗಳ ಸಂಘಟನೆ (functional integration)ಯ ದೃಷ್ಟಿಯಿಂದ ವಿವರಿಸಬಹುದು ಎಂದು ನಂಬುತ್ತಾರೆ. ವಿಲ್ಬರ್ಟ್ ಮೋರ್ (Wilbert Moore) ಕಾರ್ಯಾತ್ಮಕವಾದದ ತಮ್ಮ ಸಾರಾಂಶದಲ್ಲಿ, ಸಾಮಾನ್ಯವಾಗಿ ಒಪ್ಪಿತವಾಗಿರುವ ಅದರ ಒಂದು ಮಾದರಿಯನ್ನು ಹೀಗೆ ವಿವರಿಸುತ್ತಾರೆ:

ಹಂತ ಒಂದು ಎನ್ನುವುದು ಕಾರ್ಯಾತ್ಮಕವಾಗಿ ಸಂಯೋಜಿಸಲಾದದ್ದು ಮತ್ತು ಆದ್ದರಿಂದ ಸಾಪೇಕ್ಷವಾಗಿ ನಿಶ್ಚಲವಾದ ಸಾಂಪ್ರದಾಯಿಕ ಸಮಾಜವಾಗಿರುತ್ತದೆ; ಎರಡನೆಯ ಹಂತವು, ಆಧುನಿಕತೆಯೆಡೆಗೆ ಹೊರಳುವಲ್ಲಿ ನಡೆಯುವ ರಚನಾತ್ಮಕ ಬದಲಾವಣೆಗೆ ಸಂಬಂಧಪಟ್ಟ ಪರಿವರ್ತನಾ ಪ್ರಕ್ರಿಯೆಯನ್ನು ಒಳಗೊಂಡಿರುತ್ತದೆ; ಮೂರನೇ ಹಂತವು, ಕಾರ್ಯಾತ್ಮಕವಾಗಿ ಒಟ್ಟುಗೂಡಿದ ಸಂಪೂರ್ಣವಾಗಿ ಆಧುನೀಕರಣಗೊಂಡ ಸಮಾಜ.[2]

ಕಾರ್ಯಾತ್ಮಕವಾದವನ್ನು ಹೀಗೆ ವಿಸ್ತರಿಸಿದ್ದು ಕಾರ್ಯಾತ್ಮಕವಾದಿಗಳ ಒಳಗೆ ಮತ್ತು ಹೊರಗೆ ಎರಡೂ ಗುಂಪುಗಳಲ್ಲಿ ಸಾಕಷ್ಟು ಚರ್ಚೆಯನ್ನು ಹುಟ್ಟುಹಾಕಿದೆ. ಕೆಲವರು ಹಂತ ಸಿದ್ಧಾಂತವನ್ನು ತುಂಬ ಮಹತ್ವಾಕಾಂಕ್ಷೆಯ

ಯೋಚನೆ ಎಂದು ವಾದಿಸುತ್ತಾರೆ. ಏಕೆಂದರೆ, ಎಲ್ಲಾ ಸಮಾಜಗಳಿಗೂ ಸಮಾನವಾಗಿ ಅನ್ವಯವಾಗುವಂತಹ ಏಕೈಕ ಅಭಿವೃದ್ಧಿಯ ಮಾದರಿ ಎಂಬುದು ಯಾವುದೂ ಇಲ್ಲ ಅಥವಾ ಎಲ್ಲಾ ಸಮಾಜಗಳು 'ಆಧುನೀಕರಣ'ಗೊಳ್ಳಬೇಕಿಲ್ಲ ಎಂಬುದು ಇವರ ವಾದ. ಇನ್ನು ಕೆಲವರ ಪ್ರಕಾರ, ಆಧುನಿಕ ಸಮಾಜವನ್ನು ಮೂಲತಃ ಪ್ರಜಾಸತ್ತಾತ್ಮಕ ಮತ್ತು ಸ್ವತಂತ್ರ ಎಂದು ಬಿಂಬಿಸುವುದು ಸಾಂಪ್ರದಾಯಿಕ ಸಮಾಜಗಳ ಸ್ವರೂಪವನ್ನು ಬದಲಾಯಿಸಲು ಮಾಡುವ, ನೈತಿಕವಾಗಿ ಪ್ರಶ್ನಾರ್ಹವಾದ ಪ್ರಯತ್ನಗಳನ್ನು ಸಮರ್ಥಿಸುವಂತಿದೆ. ಅದೇನೇ ಇದ್ದರೂ, ಹಂತ ಸಿದ್ಧಾಂತವನ್ನು ಸಂಪೂರ್ಣವಾಗಿ ಎಲ್ಲ ಕಾರ್ಯಾತ್ಮಕವಾದಿಗಳು ಒಪ್ಪದೆ ಇದ್ದರೂ, ಅದು ಕೆಲವು ಪ್ರಮುಖ ಕಾರ್ಯಾತ್ಮಕವಾದಿ ಪ್ರತಿಪಾದಕರ ಕೆಲಸದ ಮುಖ್ಯ ಅಂಶವಾಗಿದೆ.[3] ಅಷ್ಟೇ ಅಲ್ಲದೆ, ಅದು ಅಭಿವೃದ್ಧಿಶೀಲ ರಾಷ್ಟ್ರಗಳ ಶೈಕ್ಷಣಿಕ ನೀತಿಗೆ ಸಂಬಂಧಿಸಿದ ವಿಷಯಗಳ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದೆ.

ಸಾಮಾನ್ಯವಾಗಿ ಬೆಳವಣಿಗೆಯ ಹಂತ ಸಿದ್ಧಾಂತವನ್ನು ಒಪ್ಪುವವರು ಸಾಂಪ್ರದಾಯಿಕ ಸಮಾಜಗಳಿಗಿಂತ ಆಧುನಿಕ ಸಮಾಜಗಳು ಕೊಡಮಾಡುವ ಲಾಭಗಳನ್ನು ಸಾಕಷ್ಟು ಸ್ಪಷ್ಟವಾಗಿ ಘೋಷಿಸುತ್ತಾರೆ. ಅವರ ಪ್ರಕಾರ, ಆಧುನಿಕ ಸಮಾಜಗಳಿಗೆ ಹೆಚ್ಚು ಜನರ ಹೆಚ್ಚೆಚ್ಚು ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗುತ್ತದೆ ಮತ್ತು ಕಡ್ಡಾಯ ಶಿಕ್ಷಣವು ಈ ಪ್ರಕ್ರಿಯೆಯ ಆವಶ್ಯಕ ಭಾಗವೆಂದು ಪರಿಗಣಿಸಲಾಗುತ್ತದೆ. ಬಹುತೇಕ ಸಾಂಪ್ರದಾಯಿಕ ಸಮಾಜಗಳು ಇತರ ವಿಧಾನಗಳ ಮೂಲಕ ಸಾಧಿಸುವ ಪಾತ್ರ ಭಿನ್ನತೆ ಮತ್ತು ಒಗ್ಗಟ್ಟನ್ನು ಶಾಲೆಗಳು ಸಾಧಿಸುತ್ತವೆ. ಸಾಂಪ್ರದಾಯಿಕ ಸಮಾಜಗಳಲ್ಲಿ ವ್ಯಕ್ತಿಗಳಿಗೆ ತಮ್ಮ ಹುಟ್ಟಿನ ಇತಿಮಿತಿಗಳ ಆಚೆಗೆ ಬೆಳೆಯುವ ಅವಕಾಶಗಳೇ ಇಲ್ಲವೆನ್ನಬಹುದು. ಸೂಕ್ತವಾದ ಸ್ಥಾನಮಾನ ಹೊಂದಿದವರಿಗೆ ಮಾತ್ರ ನಾಯಕತ್ವ ಸ್ಥಾನಗಳಿಗೆ ತರಬೇತಿಯು ಲಭ್ಯ. ಸಮಕಾಲೀನ ಕೈಗಾರಿಕಾ ಸಮಾಜದಲ್ಲಿ ಪೋಷಕರ ಸ್ಥಾನಮಾನದ ಬದಲು ಶಾಲೆಗಳು ಪ್ರಮುಖ ಆಯ್ಕೆಯ ವಿಧಾನಗಳಾಗಿ ಕೆಲಸ ಮಾಡುತ್ತವೆ. ಮೇಲಾಗಿ, ಅವು ಸಾಮಾಜಿಕ ಶ್ರೇಣಿಯ ಒಂದು ನಿರ್ದಿಷ್ಟ ಹಂತದಲ್ಲಿ ಭಾಗವಹಿಸಲು ಸೂಕ್ತವಾದ ತರಬೇತಿಯನ್ನು ಒದಗಿಸುತ್ತವೆ. ಆಧುನಿಕ ಶಾಲೆಗಳು ಸಾರ್ವತ್ರಿಕ, ಕಡ್ಡಾಯ ಶಿಕ್ಷಣದ ವ್ಯವಸ್ಥೆ ಇಲ್ಲದ ಸಮಾಜಗಳಲ್ಲಿ ನಡೆಯುವುದಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿಯೂ, ನ್ಯಾಯಯುತವಾಗಿಯೂ, ಮಾನವೀಯವಾಗಿಯೂ ಈ ಕಾರ್ಯಗಳನ್ನು ನಿರ್ವಹಿಸುತ್ತವೆ ಎಂದು ಹೆಚ್ಚಿನ ಕಾರ್ಯಾತ್ಮಕವಾದಿಗಳು ವಾದಿಸುತ್ತಾರೆ.

ಶಾಲೆಗಳು ಕುಟುಂಬದಲ್ಲಿನ ಜೀವನ ಹಾಗೂ ಒಬ್ಬ ವಯಸ್ಕನಾಗಿ ಆಧುನಿಕ, ನಗರದ, ಕೈಗಾರಿಕಾ ಸಮಾಜಗಳ ನಡುವೆ ಅತ್ಯಾವಶ್ಯಕ ಪರಿವರ್ತನಾ ಕಾರ್ಯ ವಿಧಾನವಾಗಿ ಕೆಲಸ ಮಾಡುತ್ತವೆ ಎಂದು ಹಲವು ಕಾರ್ಯಾತ್ಮಕವಾದಿಗಳು ಅಭಿಪ್ರಾಯಪಡುತ್ತಾರೆ. ಶಾಲಾಶಿಕ್ಷಣದ ಈ ಕಾರ್ಯಾತ್ಮಕವಾದಿ ದೃಷ್ಟಿಕೋನದ ಸಂಕ್ಷೇಪವಾದ ವಿವರಣೆಯು ನಮಗೆ ರಾಬರ್ಟ್ ಡ್ರೀಬೆನ್ (Robert Dreeben) ಬರೆದ On What Is Learned in School (ಆನ್ ವಾಟ್ ಇಸ್ ಲೇರ್ನ್ಡ್ ಇನ್ ಸ್ಕೂಲ್) ಪುಸ್ತಕದಲ್ಲಿ ಸಿಗುತ್ತದೆ.[4] ಶಾಲಾ ಮಕ್ಕಳು ಆಧುನಿಕ ಜಗತ್ತಿನ ಆರ್ಥಿಕ ಮತ್ತು ರಾಜಕೀಯ ಜೀವನಕ್ಕೆ ಸೂಕ್ತವಾದ ಪ್ರಮಾಣಕ (norms)ಗಳ ಪ್ರಕಾರ ಕಾರ್ಯನಿರ್ವಹಿಸುವುದನ್ನು ಕಲಿಯುತ್ತಾರೆ ಎಂದು ಡ್ರೀಬೆನ್ ವಾದಿಸುತ್ತಾರೆ. ಪ್ರಮಾಣಕಗಳು ಸೂಕ್ತ ಸನ್ನಿವೇಶಗಳಲ್ಲಿ ಒಬ್ಬರ ನಡವಳಿಕೆಯನ್ನು ನಿಯಂತ್ರಿಸಲು ಬಳಸುವ ಮಾನದಂಡಗಳು. ಡ್ರೀಬೆನ್ ಗಮನಿಸುವಂತೆ, ಅಂತಹ ಕಲಿಕೆಯನ್ನು ಶಾಲೆಯಲ್ಲಿ ಸ್ಪಷ್ಟವಾಗಿ ಬೋಧಿಸುವ ವಿಷಯಗಳಿಂದ ಪಡೆಯುವುದು ಮಾತ್ರವಲ್ಲದೆ ಶಾಲಾ ವ್ಯವಸ್ಥೆಯ ಮೂಲಭೂತ ಭಾಗವಾಗಿರುವ ಸಾಂಸ್ಥಿಕ ವಿನ್ಯಾಸಗಳಿಗೆ ಅನುಗುಣವಾಗಿ ಮಕ್ಕಳು ಕಾರ್ಯ ನಿರ್ವಹಿಸಲು ಪ್ರಾರಂಭಿಸಿದಾಗಲೂ ಕಲಿಕೆಯಾಗುತ್ತದೆ. ಸಾಂಸ್ಥಿಕ ವಿನ್ಯಾಸಕ್ಕೆ ಸಂಬಂಧಿಸಿದಂತೆ, ಏನನ್ನು ಬೋಧಿಸಲಾಗಿದೆ ಎಂಬುದಕ್ಕಿಂತ ಹೇಗೆ ಬೋಧಿಸಲಾಗಿದೆ ಎನ್ನುವಂತದ್ದು ಅಂತಹ ಪ್ರಮಾಣಕಗಳನ್ನು ಕಲಿಯಲು ಅನುವು ಮಾಡಿಕೊಡುತ್ತದೆ. ಡ್ರೀಬೆನ್ ಪ್ರಕಾರ, ಶಾಲೆಯಲ್ಲಿ ಒಂದು ಮಗು ಕೆಳಗಿನ ತರಗತಿಯಿಂದ ಮೇಲಿನ ತರಗತಿಗಳಿಗೆ ತೇರ್ಗಡೆಯಾಗುವಷ್ಟರಲ್ಲಿ ಮತ್ತು ಕುಟುಂಬದಲ್ಲಿನ ಸದಸ್ಯತ್ವದಿಂದ ಸಮಾಜದಲ್ಲಿನ ಸದಸ್ಯತ್ವ

ಪಡೆಯುವಷ್ಟರಲ್ಲಿ ನಾಲ್ಕು ಪ್ರಮುಖ ಪ್ರಮಾಣಕಗಳನ್ನು ಕಲಿಯುತ್ತದೆ. ಡ್ರೀಬೆನ್ ಈ ಪ್ರಮಾಣಕಗಳನ್ನು, "ಸ್ವಾತ್ರಂತ್ರ್ಯ", "ಸಾಧನೆ", "ವಿಶ್ವೈಕ್ಯವಾದ", ಮತ್ತು "ನಿರ್ದಿಷ್ಟತೆ" ಎಂದು ಕರೆಯುತ್ತಾರೆ.[5] ಒಬ್ಬ ವ್ಯಕ್ತಿಯು ಆಧುನಿಕ, ಕೈಗಾರಿಕಾ,ಪ್ರಜಾಸತ್ತಾತ್ಮಕ ಸಮಾಜವೊಂದರ ಸದಸ್ಯನಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕಾದರೆ ಈ ಪ್ರಮಾಣಕಗಳನ್ನು ಕಲಿಯುವುದು ಅತ್ಯವಶ್ಯಕ, ಎಂದು ಡ್ರೀಬೆನ್ ಅಭಿಪ್ರಾಯಪಡುತ್ತಾರೆ. ಮುಂದುವರಿದು, ಈ ಪ್ರಮಾಣಕಗಳನ್ನು ಪರಿಣಾಮಕಾರಿಯಾಗಿ ಮತ್ತು ದೊಡ್ಡಮಟ್ಟದಲ್ಲಿ ಬೋಧಿಸಲು ಸಾಧ್ಯವಾಗುವುದು ಶಾಲೆಗಳಲ್ಲಿ ಮಾತ್ರ ಎಂದು ಸಹ ಅವರು ನಂಬುತ್ತಾರೆ.

ಮಕ್ಕಳು ತಮ್ಮದೇ ಆದ ಕ್ರಿಯೆಗಳಿಗೆ ತಾವೇ ಜವಾಬ್ದಾರಿ ತೆಗೆದುಕೊಳ್ಳಬೇಕು ಮತ್ತು ಅಂತಹ ಕ್ರಿಯೆಗಳಿಗೆ ಇತರರು ತಮ್ಮನ್ನು ಪ್ರಶ್ನಿಸುವ ಹಕ್ಕನ್ನು ಹೊಂದಿರುತ್ತಾರೆ ಎಂಬುದನ್ನು ಅವರು ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದಾಗ ಆಗುವ ಕಲಿಕೆಯನ್ನು ಸ್ವಾತ್ರಂತ್ರ್ಯದ ಪ್ರಮಾಣಕ ಎಂದು ಕರೆಯುತ್ತಾರೆ. ಮೋಸ ಮಾಡಿದಾಗ, ಕೃತಿಚೌರ್ಯ ಮಾಡಿದಾಗ ವಿಧಿಸಲಾಗುವಂತಹ ದಂಡನೆಗಳ ಮೂಲಕ ಶಾಲಾಮಕ್ಕಳು ಈ ಪ್ರಮಾಣಕಗಳನ್ನು ಕಲಿತುಕೊಳ್ಳುತ್ತಾರೆ. ಈ ದಂಡನೆಗಳು ವಿದ್ಯಾರ್ಥಿಗಳನ್ನು ಪ್ರೌಢಜೀವನಕ್ಕೆ ಮತ್ತು ವ್ಯಕ್ತಿಗತ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾದ ಕೆಲಸಗಳಿಗೆ ಅಣಿಮಾಡುತ್ತವೆ. ಈ ಪ್ರಮಾಣಕವನ್ನು ಅಳವಡಿಸಿಕೊಳ್ಳುವುದು ಮಕ್ಕಳಿಗೆ ತಮ್ಮದೇ ಆದ ಕಾರ್ಯ ಸಾಧನೆಗೆ ಸ್ವತಃ ತಾವೇ ವೈಯಕ್ತಿಕವಾಗಿ ಜವಾಬ್ದಾರರಾಗುವುದನ್ನು ಹೇಳಿಕೊಡುತ್ತದೆ. ಸಾಧನೆಯ ಪ್ರಮಾಣಕವನ್ನು ಕಲಿಯುವುದೆಂದರೆ, ಉದಾಹರಣೆಗೆ, ನಾವು ಏನು ಸಾಧಿಸಿದ್ದೇವೆ ಎಂಬ ಆಧಾರದ ಮೇಲೆ ನಮ್ಮನ್ನು ಅಳೆಯಲಾಗುತ್ತದೆಯೇ ಹೊರತು, ಆ ನಿಟ್ಟಿನಲ್ಲಿ ನಮ್ಮ ಪ್ರಯತ್ನ ಅಥವಾ ಸದುದ್ದೇಶದ ಮೇರೆಗಲ್ಲ ಎಂಬುದನ್ನು ಕಲಿಯುವುದು. ಈ ಕಲಿಕೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳು ತಮ್ಮ ಸಾಧನೆಯನ್ನು ಇತರರ ಸಾಧನೆಯ ಜೊತೆ ಹೋಲಿಸಿ ನೋಡುವುದನ್ನು ಕಲಿಯುತ್ತಾರೆ. ಇಲ್ಲಿ ಕೆಲವು ವಿದ್ಯಾರ್ಥಿಗಳು ತಮ್ಮ ಸೋಲನ್ನು ಒಪ್ಪಿಕೊಂಡು, ಅದರ ಅನುಭವವನ್ನು ನಿಭಾಯಿಸುವುದನ್ನು ಮತ್ತು ಇತರರಿಗೆ ಕೆಲವು ನಿರ್ದಿಷ್ಟ ಕಾರ್ಯ ಸಾಧನೆಯ ಕ್ಷೇತ್ರಗಳಲ್ಲಿ ಇರಬಹುದಾದ ಹೆಚ್ಚಿನ ಕೌಶಲಗಳನ್ನು ಒಪ್ಪಿಕೊಳ್ಳುವುದನ್ನು ಕಲಿಯಬೇಕಾಗುತ್ತದೆ.

ವಿಶ್ವೈಕ್ಯವಾದ ಮತ್ತು ನಿರ್ದಿಷ್ಟತೆಯ ಪ್ರಮಾಣಕಗಳು ವ್ಯಕ್ತಿಯೊಬ್ಬನನ್ನು ಕೆಲವು ಪ್ರಮಾಣೀಕೃತ ಹೋಲಿಕೆಯ ಮಾನದಂಡ (standardized basis of comparison)ದ ಆಧಾರದ ಮೇಲೆ ನೋಡುವುದನ್ನು ಸೂಚಿಸುತ್ತವೆ. ಉದಾಹರಣೆಗೆ, ಕೆಲವು ನಿರ್ದಿಷ್ಟ ಉದ್ದೇಶ ಸಾಧನೆಗಳಿಗೆ ಸಂಬಂಧಿಸಿದಂತೆ ಒಂದನೆಯ ತರಗತಿಯ ಎಲ್ಲಾ ವಿದ್ಯಾರ್ಥಿಗಳನ್ನು (ನಿರ್ದಿಷ್ಟತೆ) ಪರಸ್ಪರ ಹೋಲಿಸಲು ಸೂಕ್ತವಾದ ಗಂಪು (ಒಂದು ಸಾರ್ವತ್ರಿಕ ಗುಂಪು). ಈ ಪ್ರಮಾಣಕಗಳು ಶಾಲೆಗಳಲ್ಲಿ ಹಲವು ವಿವಿಧ ರೀತಿಗಳಲ್ಲಿ ಕಾಣಸಿಗುತ್ತವೆ. ಉದಾಹರಣೆಗೆ, ಒಂದು ಮಗುವು ತಾನು ಮನೆಪಾಠ ಕೆಲಸ ಒಪ್ಪಿಸಲು ತಡವಾದುದಕ್ಕೆ ಕಾರಣ ಹೇಳಿ, ತನ್ನನ್ನು ಮನ್ನಿಸುವಂತೆ ಕೇಳಿಕೊಂಡಾಗ, "ಇವತ್ತು ನಿನಗೆ ಬಿಟ್ಟರೆ, ನಾಳೆ ಎಲ್ಲರಿಗೂ ಬಿಡಬೇಕಾಗುತ್ತದೆ," ಎಂಬ ಪ್ರತಿಕ್ರಿಯೆಯಲ್ಲಿ ವಿಶ್ವೈಕ್ಯವಾದ ಪ್ರಮಾಣಕ ವ್ಯಕ್ತವಾಗುತ್ತದೆ. "ಜಾನ್ ಬ್ಯಾಸ್ಕೆಟ್ ಬಾಲ್ ತಂಡದ ಸದಸ್ಯ. ಹಾಗಾಗಿ ಆಟದ ಕಾರಣ ಅವನು ಇವತ್ತಿನ ಮನೆಪಾಠ ಕೆಲಸ ಮಾಡಬೇಕಾಗಿಲ್ಲ," ಎಂದು ಶಿಕ್ಷಕರು ಹೇಳುವಾಗ, ನಿರ್ದಿಷ್ಟತೆಯ ಪ್ರಮಾಣಕವನ್ನು ಪ್ರಯೋಗಿಸಲಾಗುತ್ತಿದೆ.

ಡ್ರೀಬೆನ್ ಪ್ರಕಾರ ಒಂದು ಅಥವಾ ಹೆಚ್ಚಿನ ನಿರ್ದಿಷ್ಟ ಗುಂಪುಗಳ ಸದಸ್ಯರಾಗಿ ಎಲ್ಲಾ ವ್ಯಕ್ತಿಗಳನ್ನು ಏಕರೂಪವಾಗಿ ಪರಿಗಣಿಸುವುದನ್ನು ವಿಶ್ವೈಕ್ಯವಾದವೆಂದು ಕರೆಯಲಾಗುತ್ತದೆ. ಉದಾಹರಣೆಗೆ, ಯಾವುದೇ ಒಂದು ತಂಡದ ಸದಸ್ಯರು, ಬಸ್ಸಿನಲ್ಲಿ ಬರುವ ವಿದ್ಯಾರ್ಥಿಗಳು, ಅಥವಾ ಅಂತಿಮ ವರ್ಷದಲ್ಲಿ ಓದುತ್ತಿರುವ ಹಿರಿಯ ವಿದ್ಯಾರ್ಥಿಗಳು. ವಿಶ್ವೈಕ್ಯವಾದದ ಪ್ರಮಾಣಕವನ್ನು ಸ್ವೀಕರಿಸಲು ಕಲಿಯುವುದರಲ್ಲಿ ಇರುವ ಮುಖ್ಯ ಅಂಶವೇನೆಂದರೆ, ಹಾಗೆ ಕಲಿಯುವುದರಿಂದ ಕೆಲವು ನಿರ್ದಿಷ್ಟ ಸನ್ನಿವೇಶಗಳಲ್ಲಿ ತಮ್ಮ ವೈಯಕ್ತಿಕತೆಯನ್ನು

ಬದಿಗಿಟ್ಟು ಗುಂಪಿನ ಸದಸ್ಯರಾಗಿ ಗುರುತಿಸಲ್ಪಡುವುದನ್ನು ಒಪ್ಪಿಕೊಳ್ಳಲು ಸಾಧ್ಯವಾಗುತ್ತದೆ. ವಿಶ್ವೈಕ್ಯವಾದವು ಎಲ್ಲರನ್ನೂ ಒಂದೇ ರೀತಿಯಾಗಿ ಪರಿಗಣಿಸುವುದನ್ನು ಬೇಡುತ್ತದೆ. ಉದಾಹರಣೆಗೆ, ತಂಡದ ಎಲ್ಲಾ ಸದಸ್ಯರು ಎಲ್ಲಾ ಅಭ್ಯಾಸದ ತರಬೇತಿಗಳಲ್ಲಿ ಭಾಗವಹಿಸಬೇಕು ಎಂಬುದು ಕಡ್ಡಾಯ. ನಿರ್ದಿಷ್ಟತೆ ಅಪವಾದಗಳಿಗೆ ಅವಕಾಶ ಕೊಡುತ್ತದೆ. ತರಬೇತುದಾರರು ತಂಡದ ಸದಸ್ಯನೊಬ್ಬ ಆಚರಿಸುವ ಆದರೆ ತಂಡದ ಇತರರು ಆಚರಿಸದ ಧಾರ್ಮಿಕ ಕಾರಣಕ್ಕಾಗಿ ಆ ಆಟಗಾರನನ್ನು ತರಬೇತಿಗೆ ಅನುಪಸ್ಥಿತನಾಗಿರಲು ಅನುಮತಿಸಬಹುದು. ವಿಶಿಷ್ಟತಾವಾದವು ನ್ಯಾಯಬದ್ಧವಲ್ಲದ ಅಪವಾದಗಳನ್ನು ಮಾಡುತ್ತದೆ. ತನ್ನ ಸಹೋದ್ಯೋಗಿಯ ಮಗ ಎಂಬ ಕಾರಣಕ್ಕೆ ತರಬೇತುದಾರರು ಒಬ್ಬ ವಿದ್ಯಾರ್ಥಿಗೆ ವಿಶೇಷ ಅನುಕೂಲಗಳನ್ನು ಒದಗಿಸುವಲ್ಲಿ ನಮಗೆ ವಿಶಿಷ್ಟತಾವಾದಕ್ಕೆ ಒಂದು ಉದಾಹರಣೆ ಸಿಗುತ್ತದೆ. ನಿರ್ದಿಷ್ಟತೆಯ ಪ್ರಮಾಣಕವು ವಿಶ್ವೈಕ್ಯವಾದದೊಂದಿಗೆ ಸಂಬಂಧ ಹೊಂದಿದೆ. ಒಂದು ಕಾರ್ಯೋದ್ದೇಶ ಸಾಧನೆಗಾಗಿ ಮಾಡಿರುವ ಗುಂಪಿನ ಸದಸ್ಯರೆಲ್ಲರನ್ನೂ ಒಂದೇ ರೀತಿಯಾಗಿ ಪರಿಗಣಿಸಬೇಕಾದ ಬಾಧ್ಯತೆಯನ್ನು ಅದು ಒತ್ತಿಹೇಳುತ್ತದೆ. ವಿದ್ಯಾರ್ಥಿಗಳು ನ್ಯಾಯಬದ್ಧವಾದ ಆಧಾರಗಳ ಮೇಲೆ ಮಾತ್ರ ಅಪವಾದಗಳನ್ನು ಮಾಡಬಹುದು ಎಂಬುದನ್ನು ಕಲಿಯುತ್ತಾರೆ. ಕೆಲವು ಚಟುವಟಿಕೆಗಳಿಗೆ ನಿರ್ದಿಷ್ಟತೆಗೆಂದು ಇರುವ ಮುಖ್ಯ ಪ್ರವರ್ಗಗಳ ಸಂಖ್ಯೆ ದೊಡ್ಡದಿರಬಹುದು. ಉದಾಹರಣೆಗೆ, ಪ್ರಾಥಮಿಕ ಶಾಲಾ ಶಿಕ್ಷಕರೊಬ್ಬರಿಗೆ ವಿದ್ಯಾರ್ಥಿಗಳ ವಯಸ್ಸು, ಸಾಮರ್ಥ್ಯ, ಪ್ರೌಢತೆ, ಮತ್ತು ಕೌಟುಂಬಿಕ ಸ್ಥಿರತೆ ಮುಖ್ಯವೆನ್ನಿಸಬಹುದು. ಇನ್ನೊಬ್ಬ ಪ್ರೌಢಶಾಲಾ ಶಿಕ್ಷಕರು ಒಂದು ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಯ ಸಾಧನೆಯನ್ನು ಮಾತ್ರ ಮುಖ್ಯವೆಂದು ಪರಿಗಣಿಸಬಹುದು.

ಈ ನಾಲ್ಕು ಪ್ರಮಾಣಕಗಳನ್ನು ಶಾಲೆಯಲ್ಲಿ ಕಲಿಸುವಷ್ಟು ಪರಿಣಾಮಕಾರಿಯಾಗಿ ಕುಟುಂಬದಲ್ಲಿ ಕಲಿಸುವುದು ಸಾಧ್ಯವಾಗಬಹುದು, ಆಗದೇ ಇರಬಹುದು. ಡ್ರೀಬೆನ್ ಗಮನಿಸುವಂತೆ, ಕುಟುಂಬಕ್ಕೆ ವ್ಯತಿರಿಕ್ತವಾಗಿ ಶಾಲೆಯು ಮಕ್ಕಳಿಗೆ ಸಮಾನಸ್ಕಂಧರ ಗುಂಪನ್ನು ಒದಗಿಸುತ್ತದೆ ಮತ್ತು ತಮ್ಮ ಸ್ವಂತ ವ್ಯಕ್ತಿಗತ ಸಾಧನೆಯನ್ನು ಇತರರ ಸಾಧನೆಯೊಂದಿಗೆ ಹೋಲಿಸಿಕೊಳ್ಳಲು ಅವಕಾಶ ಕಲ್ಪಿಸುತ್ತದೆ. ಶಾಲೆಯಲ್ಲಿ ಮಕ್ಕಳು ವಯಸ್ಸಿಗೆ ಅನುಗುಣವಾಗಿ ಗುಂಪುಗಳಲ್ಲಿ ವಿಂಗಡಿಸಲ್ಪಡುತ್ತಾರೆ, ಮತ್ತು ಇದು ತಮ್ಮದೇ ಆದ ಸ್ವಾತ್ರಂತ್ರ್ಯ ಮತ್ತು ಸಾಧನೆಯನ್ನು ಪರಸ್ಪರ ಹೋಲಿಸಿ ನೋಡಲು ಅವರಿಗೆ ಒಂದು ಸ್ಪಷ್ಟವಾದ ಮಾನದಂಡವನ್ನು ಒದಗಿಸುತ್ತದೆ. ಸಮಾನಸ್ಕಂಧರಾಗಿ ಇತರರೊಂದಿಗಿನ ಹೋಲಿಕೆ ವಿಶ್ವೈಕ್ಯವಾದ ಮತ್ತು ನಿರ್ದಿಷ್ಟತೆಯ ಪ್ರಮಾಣಕಗಳನ್ನು ಕಲಿಯುವುದಕ್ಕೆ ಅಗತ್ಯವಾಗಿದ್ದು ಶಾಲೆಯಲ್ಲಿ ಅದಕ್ಕೆ ವಿಫುಲ ಅವಕಾಶಗಳಿರುತ್ತವೆ.

ಒಬ್ಬ ಕಾರ್ಯಾತ್ಮಕವಾದಿಯಾಗಿ ಡ್ರೀಬೆನ್, ನಿಖರವಾಗಿ, ಸ್ವಾತಂತ್ರ್ಯ, ಸಾಧನೆ, ವಿಶ್ವೈಕ್ಯವಾದ, ಮತ್ತು ನಿರ್ದಿಷ್ಟತೆಯ ನಾಲ್ಕು ಪ್ರಮಾಣಕಗಳು ಸಮಕಾಲೀನ ಕೈಗಾರಿಕಾ ಸಮಾಜದಲ್ಲಿ ಒಬ್ಬ ಕಾರ್ಮಿಕನಾಗಿ ಮತ್ತು ಪೌರನಾಗಿ ಕಾರ್ಯನಿರ್ವಹಿಸಲು ಅವಶ್ಯವೆಂದು ಅಭಿಪ್ರಾಯಪಡುತ್ತಾರೆ. ಶಾಲಾ ಜೀವನದಲ್ಲಿ ಭಾಗವಹಿಸುವ ಮೂಲಕ ದಾಟಿಸಲಾಗುವ ಈ ನಾಲ್ಕು ಪ್ರಮಾಣಕಗಳನ್ನು ಒಪ್ಪಿಕೊಳ್ಳಲು ಕಲಿಯುವುದರಿಂದ ವಿದ್ಯಾರ್ಥಿಗಳು "ಸಮಾಜದ ಪ್ರಮುಖ ಸಾಂಸ್ಥಿಕ ಕ್ಷೇತ್ರಗಳಲ್ಲಿ ಭಾಗವಹಿಸಲು, ಈ ಕ್ಷೇತ್ರಗಳ ಸಾಮಾಜಿಕ ಸ್ಥಾನಗಳನ್ನು ತುಂಬಲು, ಮತ್ತು ತಮ್ಮ ಕೆಲಸದ ಒತ್ತಡಗಳನ್ನು ನಿಭಾಯಿಸಲು ಹಾಗೂ ಈ ಸ್ಥಾನಗಳು ಒದಗಿಸುವ ಅವಕಾಶಗಳನ್ನು ಬಳಸಿಕೊಳ್ಳಲು ಅನುವು ಮಾಡಿಕೊಡುವ ಮಾನಸಿಕ ಸಾಮರ್ಥ್ಯಗಳನ್ನು ಬೆಳಸಿಕೊಳ್ಳುತ್ತಾರೆ."[6]

**ಶಿಕ್ಷಣದ ಸಮಾನತೆಯ ಅವಕಾಶ**

"ಬೇಕಾಗಿದ್ದಾರೆ. ಪ್ರತಿಷ್ಠಿತ ವ್ಯಾಪಾರೋದ್ಯಮ ಸಂಸ್ಥೆಯಲ್ಲಿ ನಿರ್ವಾಹಕರ ಸ್ಥಾನಕ್ಕೆ ಬಿಳಿಯ ಜನಾಂಗದ, ಕ್ರೈಸ್ತ ಧರ್ಮಕ್ಕೆ ಸೇರಿದ ಪುರುಷರು ಬೇಕಾಗಿದ್ದಾರೆ. ಅಭ್ಯರ್ಥಿಗಳು ಐವಿ ಲೀಗ್‌ಗ ಸೇರಿದ ಶಿಕ್ಷಣ ಸಂಸ್ಥೆಯ

ಪದವೀಧರರಾಗಿರಬೇಕು. ಉದ್ಯೋಗದಲ್ಲಿ ಹೆಚ್ಚಿನ ಬೆಳವಣಿಗೆಗೆ ಅತ್ಯುತ್ತಮ ಅವಕಾಶಗಳು ಲಭ್ಯ." ಇದು ಒಂದು ಕಾಲ್ಪನಿಕ ಜಾಹೀರಾತು. ಈ ಜಾಹೀರಾತಿಗೆ ನಿಮ್ಮ ಸ್ವಂತ ಪ್ರತಿಕ್ರಿಯೆಯನ್ನು ಗಮನಿಸುವುದರ ಮೂಲಕ ನೀವು ಶಾಲೆಯಲ್ಲಿ ಕಲಿತಿರಬಹುದಾದ, ಈ ಮೊದಲು ಚರ್ಚಿಸಿದ ನಾಲ್ಕು ಪ್ರಮಾಣಕಗಳ ಪ್ರಭಾವವನ್ನು ನೋಡಬಹುದು.

ಈ ತರಹದ ಜಾಹೀರಾತುಗಳು ಸಾಮಾನ್ಯವಾಗಿದ್ದ ಕಾಲ ಒಂದಿತ್ತು. ಈ ರೀತಿಯ ಬಹಿರಂಗ ತಾರತಮ್ಯದ ಕುರಿತು ಹಲವು ಜನಾಂಗೀಯ ಗುಂಪುಗಳಿಗೆ ಹೇಳಲಿರುವ ಕತೆಗಳು ಇವೆ. ಇವತ್ತಿನ ಸಂದರ್ಭದಲ್ಲಿ ಇಂತಹ ಜಾಹೀರಾತು ಕಂಡುಬಂದರೆ ಅದು ಕೂಡಲೆ ಜನರ ಕೆಂಗಣ್ಣಿಗೆ ಗುರಿಯಾಗುವುದು ನಿಶ್ಚಿತ. ಇದು ಬಹಳಷ್ಟು ಜನರಲ್ಲಿ ಇರುವ ನ್ಯಾಯೋಚಿತ ಭಾವವನ್ನು ಘಾಸಿಗೊಳಿಸುತ್ತದೆ (ಹಾಗೆಯೇ ತಾರತಮ್ಯದ ವಿರುದ್ಧದ ಕಾನೂನುಗಳನ್ನು ಉಲ್ಲಂಘಿಸುತ್ತದೆ). ಏಕೆಂದರೆ ಹುದ್ದೆಯಲ್ಲಿ ಯಶಸ್ವಿ ಕಾರ್ಯ ಸಾಧನೆಗೆ ಅಪ್ರಸ್ತುತವಾದ ಅರ್ಹತೆಗಳನ್ನು ಷರತ್ತುಗಳಾಗಿ ವಿಧಿಸುತ್ತದೆ. ಪ್ರಸಕ್ತ ಸಮಾಜದಲ್ಲಿ ಈ ರೀತಿಯ ಜಾಹೀರಾತು ಎದುರಿಸಬಹುದಾದ ಖಂಡನೆಗೆ ಕಾರಣವಾಗಿರುವುದು, ವಿಶ್ವೈಕ್ಯವಾದದ ಮತ್ತು ಸಾಧನೆಯ ಪ್ರಮಾಣಕಗಳಿಗೆ ಬದ್ಧರಾಗಿರುವುದನ್ನು ಅಗತ್ಯವಾಗಿಸುವ ಮನಸ್ಸಿಗೆ ಸಂಬಂಧಿಸಿದ ಧೋರಣೆಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವಲ್ಲಿ ಶಾಲೆಗಳು ಪಾತ್ರ ವಹಿಸುತ್ತವೆ, ಎಂದು ಡ್ರೀಬೆನ್ ಮತ್ತು ಇತರ ಕಾರ್ಯಾತ್ಮಕವಾದಿಗಳು ಅಭಿಪ್ರಾಯಪಡುತ್ತಾರೆ. ವ್ಯಕ್ತಿಯ ಸಾಧನೆ ಮತ್ತು ಅರ್ಹತೆಯ ಆಧಾರದ ಮೇಲೆ ಸೂಕ್ತ ಪ್ರತಿಫಲಗಳು ನೀಡಲಾಗುತ್ತದೆ ಎಂದು ನಿರೀಕ್ಷಿಸುವುದು ನಮಗೆ ಸಹಜವಾಗಿ ಹೋಗಿದೆ. ಹೀಗೆ, ಶಾಲೆಯಲ್ಲಿ ಬೆಳಸಲಾಗುವ ಪ್ರಮಾಣಕಗಳು ಸಮಕಾಲೀನ ಕೈಗಾರಿಕಾ ಸಮಾಜಗಳೊಂದಿಗೆ ತಳಕು ಹಾಕಿಕೊಂಡಿರುವ ಸಮಾನ ಅವಕಾಶ ತತ್ವ ಎಂಬ ಮುಖ್ಯವಾದ ನೈತಿಕ ತತ್ವದೊಂದಿಗೆ ಸಂಬಂಧ ಹೊಂದಿವೆ.

ವ್ಯಕ್ತಿಗಳನ್ನು ನಿರ್ದಿಷ್ಟ ಪಾತ್ರಗಳನ್ನು ನಿರ್ವಹಿಸಲೆಂದು ಆಯ್ಕೆಮಾಡಬೇಕು ಮತ್ತು ಆರೋಪಿತ ಗುಣಲಕ್ಷಣಗಳ ಆಧಾರದ ಬದಲು ಗಳಿಸಿದ ಗುಣಲ್ಷಣಗಳ ಆಧಾರದ ಮೇಲೆ ಪ್ರತಿಫಲವನ್ನು ನೀಡಬೇಕು ಎನ್ನುವುದು ಸಮಾನ ಅವಕಾಶದ ಕಲ್ಪನೆಯಾಗಿದೆ. ಒಬ್ಬ ವ್ಯಕ್ತಿಯು ತನ್ನ ಹುಟ್ಟು ಮತ್ತು ಕೌಟುಂಬಿಕ ಹಿನ್ನೆಲೆಯ ಆಧಾರದ ಮೇಲೆ ಹೊಂದಿರುವ ಗುಣಲಕ್ಷಣವನ್ನು ಆರೋಪಿತ ಗುಣಲಕ್ಷಣವೆಂದು ಕರೆಯಲಾಗುತ್ತದೆ. ಎಲ್ಲಿ ಕೇವಲ ಕೌಟುಂಬಿಕ ಹಿನ್ನೆಲೆಯ ಆಧಾರದ ಮೇಲೆ ರಾಜಕೀಯ ಸ್ಥಾನಮಾನ, ಆದಾಯ, ಅಥವಾ ಹಕ್ಕುಗಳು ನಿರ್ಣಯವಾಗುತ್ತವೋ, ಆಗ ಅಂತಹ ಸಂದರ್ಭಗಳಲ್ಲಿ ನಾವು ಆರೋಪಿತ ಗುಣಲಕ್ಷಣಗಳ ಆಧಾರದ ಮೇಲೆ ಪ್ರತಿಫಲಗಳು ನೀಡಲಾಗುತ್ತಿರುವ ಸನ್ನಿವೇಶವನ್ನು ಎದುರಿಸುತ್ತೇವೆ. ನಿರ್ವಹಿಸಬೇಕಾದ ಕೆಲಸಕ್ಕೆ ಅಪ್ರಸ್ತುತವಾದ ಅಂಶಗಳನ್ನು ಕಡೆಗಣಿಸಿದಾಗ, ಮತ್ತು ವ್ಯಕ್ತಿಗೆ ಅವನ ಸಾಧನೆಗೆ ಅನುಗುಣವಾಗಿ ಅಥವಾ ಉನ್ನತ-ಮಟ್ಟದ ಕಾರ್ಯ ಸಾಧನೆಯ ಭರವಸೆಯನ್ನು ಸೂಚಿಸುವ ಗುಣಗಳಿಗೆ ಪ್ರತಿಫಲ ನೀಡಿದಾಗ, ಗಳಿಸಿದ ಗುಣಗಳ ಆಧಾರದ ಮೇಲೆ ಪ್ರತಿಫಲಗಳು ನೀಡಲಾಗುತ್ತಿರುವುದನ್ನು ನಾವು ಆ ಸನ್ನಿವೇಶದಲ್ಲಿ ನೋಡುತ್ತೇವೆ. ಬಹುತೇಕ ಸಂದರ್ಭಗಳಲ್ಲಿ, ಜನರು ಸಾಮಾಜಿಕ ಹಿನ್ನೆಲೆ, ಜನಾಂಗ, ಧರ್ಮ, ಲಿಂಗ, ಇತ್ಯಾದಿಗಳನ್ನು ಅಮುಖ್ಯವಾದ, ಆರೋಪಿತ ಗುಣಲಕ್ಷಣಗಳು ಎಂದು ಗುರುತಿಸುತ್ತಾರೆ, ಮತ್ತು ಅವರು ಪ್ರತಿಭೆ, ಸಾಮರ್ಥ್ಯ ಹಾಗೂ ಪ್ರೇರಣೆ, ಇತ್ಯಾದಿಗಳನ್ನು ಮುಖ್ಯವಾದ, ಗಳಿಸಿದ ಗುಣಲಕ್ಷಣಗಳು ಎಂದು ಗುರುತಿಸುತ್ತಾರೆ.

ಆಧುನಿಕ ಸಮಾಜಗಳಲ್ಲಿ ಆರೋಪಿತ ಪ್ರತಿಫಲಗಳಿಂದ ಗಳಿಸಿದ ಪ್ರತಿಫಲಕ್ಕೆ ಆದ ಬದಲಾವಣೆಗೆ ಕಾರ್ಯಾತ್ಮಕವಾದಿಗಳು ಮೂರು ಕಾರಣಗಳನ್ನು ಕೊಡುತ್ತಾರೆ. ಮೊದಲನೆಯದಾಗಿ, ಕೈಗಾರಿಕಾ ಸಮಾಜಗಳು ಬೇಡುವ ನಿರಂತರವಾಗಿ ವಿಸ್ತರಿಸುತ್ತಾ ಹೋಗುವ ಕೌಶಲಗಳು ಸಾಮಾನ್ಯವಾಗಿ ಕುಟುಂಬ ಅಥವಾ ಸ್ಥಳೀಯ ಸಮಾಜದ ಮೂಲಕ ಬಳುವಳಿಯಾಗಿ ಪಡೆದಂತಹ ಕೌಶಲಗಳನ್ನು ಪ್ರಯೋಗವಳಿದಂತವುಗಳನ್ನಾಗಿ ಮಾಡುತ್ತವೆ ಎಂದು ಭಾವಿಸಲಾಗುತ್ತದೆ. ಹೀಗೆ, ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ದಾಟಿಸಿದಂತಹ ಕೌಶಲಗಳಿಗೆ ಪ್ರತಿಫಲ ನೀಡುವುದು ಆಧುನಿಕ ಅಗತ್ಯಗಳನ್ನು ಪುರೈಸಲು ಅಗತ್ಯವಿರುವ ಹೊಸಜ್ಞಾನ ಮತ್ತು

ಕೌಶಲಗಳ ಬೆಳವಣಿಗೆಯನ್ನು ಕುಂಠಿತಗೊಳಿಸುವ ಕಾರಣಕ್ಕೆಂದೇ ಇರಬಹುದು. ಎರಡನೆಯದಾಗಿ, ಹೆಚ್ಚುತ್ತಿರುವ ಹೊಸ ಕೌಶಲಗಳ ಅಗತ್ಯತೆಯು ಸಾಂಪ್ರದಾಯಿಕವಾಗಿ ಅವರಿಗೆ ಅವಕಾಶಗಳನ್ನು ನಿರಾಕರಿಸಿದಂತಹ ಸಮುದಾಯಗಳ ಪ್ರತಿಭಾವಂತರಿಗೆ ಅವಕಾಶಗಳನ್ನು ತೆರೆಯುವುದನ್ನು ಬೇಡುತ್ತದೆ. ಮೂರನೆಯದಾಗಿ, ರಾಜಕೀಯ ಸ್ಥಿರತೆಯು ತಾವು ಒಂದು ನ್ಯಾಯಯುತ ವ್ಯವಸ್ಥೆಯ ನಿಯಮಗಳ ಅಡಿಯಲ್ಲಿ ಸ್ಪರ್ಧಿಸಿದೆವು ಎಂದು ಪ್ರತಿಫಲವನ್ನು ಪಡೆಯದೆ ಇರುವವರು ಮಾತ್ರವಲ್ಲದೆ, ಪಡೆದವರು ಸಹ ನಂಬುವುದನ್ನು ಬೇಡುತ್ತದೆ. ಹೀಗೆ, ಸಮಾನ ಅವಕಾಶ ಎಂಬ ಆದರ್ಶವು ಕೇವಲ ನೈತಿಕವಾಗಿ ಸರಿಯಾಗಿರುವುದು ಎಂದಷ್ಟೇ ಅಲ್ಲದೆ, ಆಧುನಿಕ ಸಮಾಜದಲ್ಲಿ ಸ್ಥಿರತೆಯ ಅಗತ್ಯತೆಗಳಿಗೆ ಕೂಡ ಹೊಂದಿಕೆಯಿರುವಂತದ್ದು ಎಂದು ಭಾವಿಸಲಾಗುತ್ತದೆ.

ಕಾರ್ಯಾತ್ಮಕವಾದಿಗಳು ವಿವರಿಸುವ ಕುಟುಂಬದ ವೈಯಕ್ತಿಕ ಜೀವನದಿಂದ ಆಧುನಿಕ ಅಧಿಕಾರಶಾಹಿ ಜೀವನದೆಡೆಗಿನ ಪರಿವರ್ತನೆಯು ಅದು ಅಗತ್ಯವಾಗಿ ಪ್ರಜ್ಞಾಪೂರ್ವಕವಾಗಿ ಸಂಭವಿಸುವುದಿಲ್ಲ ಎಂಬ ಅಂಶವನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕಾಗಿದೆ. ನಾವು ಒಂದು ನಿರ್ದಿಷ್ಟ ಗಳಿಗೆಯಲ್ಲಿ ಶಿಕ್ಷಕರನ್ನು, 'ಏನು ಮಾಡುತ್ತಿದ್ದೀರಿ?' ಎಂದು ಕೇಳಿದರೆ, ಅವರು ನಿರ್ದಿಷ್ಟ ರೀತಿಗಳಲ್ಲಿ ಉತ್ತರ ಕೊಡುವ ಸಾಧ್ಯತೆ ಇದೆ, "ನಾನು ಕಾಗುಣಿತ ಹೇಳಿಕೊಡುತ್ತಿದ್ದೇನೆ," ಅಥವಾ, "ಮಕ್ಕಳು ಮತ್ತು ನಾನು ಜೊತೆಗೂಡಿ ಭಿನ್ನರಾಶಿಗಳನ್ನು ಪರಿಹರಿಸುತ್ತಿದ್ದೇವೆ," ಇತ್ಯಾದಿ ಆಗಿರುತ್ತದೆ. ಅವರಿಂದ ನಿಮಗೆ ಯಾವತ್ತೂ, "ನಾನು ನನ್ನ ವಿದ್ಯಾರ್ಥಿಗಳಿಗೆ ಸಂಬದ್ಧ ಪ್ರವರ್ಗಗಳಿಗೆ ಅನುಗುಣವಾಗಿ ಸ್ವತಃ ತಮ್ಮ ಮತ್ತು ಇತರರ ಬಗ್ಗೆ ಅಭಿಪ್ರಾಯಗಳನ್ನು ಹೊಂದಲು ಹೇಳಿಕೊಡುತ್ತಿದ್ದೇನೆ," ಎಂದಾಗಲಿ, ಅಥವಾ "ನಾನು ಮಕ್ಕಳಿಗೆ 'ಅಧಿಕಾರಶಾಹಿ ವ್ಯವಸ್ಥೆಯೊಳಗೆ ಕಾರ್ಯನಿರ್ವಹಿಸುವುದು ಹೇಗೆ,' ಎಂಬುದನ್ನು ಹೇಳಿಕೊಡುತ್ತಿದ್ದೇನೆ," ಎಂಬ ಪ್ರತಿಕ್ರಿಯೆಗಳು ಬರುವುದು ಅಪರೂಪ. ಈ ರೀತಿಯ ಪ್ರತಿಕ್ರಿಯೆಗಳು ನೇರವಾಗಿ ವ್ಯಕ್ತವಾಗದೆ ಹೋದರೂ, ಕಾರ್ಯಾತ್ಮಕವಾದಿಗಳ ಪ್ರಕಾರ, ತರಗತಿಯಲ್ಲಿ ನಡೆಯುವ ಪ್ರಕ್ರಿಯೆ ಇದೇ ಆಗಿರುತ್ತದೆ. ಹಾಗಿರುವಾಗ, ನಾವು ಇಲ್ಲಿ ಕೇಳಬೇಕಾದ ಮತ್ತು ಉತ್ತರಿಸಬೇಕಾದ ಆಸಕ್ತಿದಾಯಕ ಪ್ರಶ್ನೆ ಎಂದರೆ, "ಅದು ಹೇಗೆ ನಡೆಯುತ್ತದೆ?" ಎಂಬುದು.

ಕುಟುಂಬದಲ್ಲಿನ ಜೀವನದಿಂದ ಕೆಲಸದ ಜೀವನ ಮತ್ತು ಪೌರತ್ವದೆಡೆಗಿನ ಪಲ್ಲಟದಲ್ಲಿ ಶಾಲೆಯ ಪಾತ್ರವನ್ನು ವಿವರಿಸಲು ಬಳಸಲಾಗುವ ಪರಿಕಲ್ಪನೆಗಳಲ್ಲಿ "ಗುಪ್ತ ಪಠ್ಯಕ್ರಮ"ದ ಪರಿಕಲ್ಪನೆಯು ಒಂದಾಗಿದೆ. ಕೈಗಾರಿಕಾ ಸಮಾಜದಲ್ಲಿ ಕೆಲಸಕ್ಕೆ ಹಾಗೂ ಪೌರತ್ವದ ಹಕ್ಕು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಸೂಕ್ತವಾದ ಮಾನಸಿಕ ಪ್ರವೃತ್ತಿಗಳನ್ನು ಬೆಳೆಸಲು ಬೇಕಿರುವ ರಚನೆಯನ್ನು ಒದಗಿಸುವ ಶಾಲಾ ಜೀವನಕ್ಕೆ ಸಂಬಂಧಿಸಿದ ಸಾಂಸ್ಥಿಕ ಸ್ವರೂಪಗಳು ಮತ್ತು ದಿನಚರಿಗಳನ್ನು ಗುಪ್ತ ಪಠ್ಯಕ್ರಮವೆಂದು ಕರೆಯಲಾಗುತ್ತದೆ. ಸರದಿಗಾಗಿ ಸಾಲಿನಲ್ಲಿ ನಿಲ್ಲುವುದು, ಶಿಕ್ಷಕರ ಗಮನ ಸೆಳೆಯಲು ಸ್ಪರ್ಧಿಸುವುದು, "ಮೋಸ ಮಾಡಿದರೆ" ವಿಧಿಸಲಾಗುವ ದಂಡನೆಗಳು, ಗಡಿಯಾರವು ನಿಯಂತ್ರಿಸುವ ಚಟುವಟಿಕೆಗಳ ವೇಳಾಪಟ್ಟಿ, ಇವೆಲ್ಲವೂ ಆಧುನಿಕ ಸಮಾಜದ ಸಂಸ್ಥೆಗಳಿಗೆ ಬೇಕಾದಂತಹ ವರ್ತನೆಗಳನ್ನು ಬೆಳೆಸಲು ಸಹಾಯ ಮಾಡುತ್ತವೆ. ವಿದ್ಯಾರ್ಥಿಯು ಸಾಂಸ್ಥಿಕವಾಗಿ ಅನುಮೋದಿಸಿದ ವರ್ತನಾ ಮಾದರಿಗಳಿಗೆ ಅನುಗುಣವಾಗಿ ತನ್ನ ಉದ್ರೇಕಗಳನ್ನು ನಿರ್ದೇಶಿಸಲು ಮತ್ತು ನಿಯಂತ್ರಿಸಲು ಕಲಿಯುತ್ತಾನೆ/ಳೆ.[7]

### ಶೈಕ್ಷಣಿಕ ಸುಧಾರಣೆ: ಮೂರು ಸನ್ನಿವೇಶಗಳು

ಶಾಲೆಗಳು ಮತ್ತು ಇನ್ನಿತರ ಸಾಂಸ್ಥಿಕ ಸಂರಚನೆಗಳು ಸಮಾಜದಲ್ಲಿ ವಹಿಸುವ ಪಾತ್ರವನ್ನು ಅರ್ಥಮಾಡಿಕೊಳ್ಳುವುದಕ್ಕೆ ಕಾರ್ಯಾತ್ಮಕವಾದವು ಕೇವಲ ಒಂದು ವೈಜ್ಞಾನಿಕ ಸಿದ್ಧಾಂತಕ್ಕಿಂತ ಹೆಚ್ಚಿನದಾಗಿ ಕಾರ್ಯ ನಿರ್ವಹಿಸಿದೆ. ಅದು ಆಧುನಿಕ ಸಮಾಜದ ಸುಧಾರಣೆ ಮತ್ತು ಅಭಿವೃದ್ಧಿಯಲ್ಲಿ ಆಸಕ್ತಿ ಹೊಂದಿದವರಿಗೆ

ಒಂದು ಸೈದ್ಧಾಂತಿಕ ಮಾರ್ಗದರ್ಶಿಯಾಗಿಯೂ ಸಹ ಕಾರ್ಯ ನಿರ್ವಹಿಸಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಇಪ್ಪತ್ತನೆಯ ಶತಮಾನದ ಹಲವು ರೀತಿಯ ಶೈಕ್ಷಣಿಕ ಸುಧಾರಣೆಗಳಿಗೆ ಕಾರ್ಯಾತ್ಮಕವಾದವು ವೈಜ್ಞಾನಿಕ ಅಡಿಪಾಯವನ್ನು ಮತ್ತು ಸಮರ್ಥನೆ ಎರಡನ್ನೂ ಒದಗಿಸುವುದರ ಮೂಲಕ ಕಾರ್ಯ ನಿರ್ವಹಿಸಿದೆ. ಶೈಕ್ಷಣಿಕ ಸುಧಾರಕರು ಕಾರ್ಯಾತ್ಮಕವಾದವನ್ನು ಬಳಸುವುದರ ಹಿಂದಿರುವ ಕಾರಣವನ್ನು ಅರ್ಥಮಾಡಿಕೊಳ್ಳುವುದು ಸುಲಭ. ಸಮಕಾಲೀನ ಸಮಾಜದ ಅಗತ್ಯಗಳನ್ನು ಪೂರೈಸಲು ಆಧುನಿಕ ಶಾಲಾ ಶಿಕ್ಷಣದ ಅಗತ್ಯವಿದೆ ಎಂಬ ಅಂಶವನ್ನು ಒಮ್ಮೆ ಗುರುತಿಸಿದ ಮೇಲೆ, ಆ ಅಗತ್ಯಗಳ ನಿಖರ ಸ್ವರೂಪವನ್ನು ಗುರುತಿಸಲು ಪ್ರಯತ್ನಿಸುವುದು ಮತ್ತು ಆ ಅಗತ್ಯಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಪೂರೈಸುವಂತೆ ಶೈಕ್ಷಣಿಕ ನೀತಿಗಳನ್ನು ರೂಪಿಸುವುದು ಸಹಜವಾದ ಮುಂದಿನ ಹೆಜ್ಜೆಯಾಗಿರುತ್ತದೆ. ಹೆಚ್ಚಿನ ಶೈಕ್ಷಣಿಕ ಸುಧಾರಣೆಗಳು, ಶಾಲೆಗಳು ಆಧುನಿಕ ಸಮಾಜದ ಬದಲಾಗುತ್ತಿರುವ ಬದುಕಿಗೆ ಜನರು ಹೊಂದಿಕೊಳ್ಳಲು ಸಹಾಯ ಮಾಡುವ ಕಾರ್ಯ ನಿರ್ವಹಿಸುತ್ತವೆ, ಎಂಬ ಕಾರ್ಯಾತ್ಮಕವಾದಿ ದೃಷ್ಟಿಕೋನದ ಆಧಾರದ ಮೇಲೆ ರೂಪಿಸಲಾಗಿದೆ. ಹೊಂದಾವಣೆ ಒಂದು ಸಮಸ್ಯೆಯಾಗಿ ಮತ್ತು ಅದು ಅಪಸಾಮಾನ್ಯ ಕಾರ್ಯದಲ್ಲಿ ಪರಿಣಾಮಿಸಿದಾಗ, ಅದನ್ನು ಸರಿಪಡಿಸಲು ಶಾಲಾ ಶಿಕ್ಷಣವು ಒಂದು ದಾರಿ ಎಂದು ಭಾವಿಸುವುದರಲ್ಲಿ ತಪ್ಪೇನಿಲ್ಲ. ನಾವು ಕೆಲವು ಕಾಲ್ಪನಿಕ ಸನ್ನಿವೇಶಗಳನ್ನು ಪರಿಗಣಿಸುವುದರ ಮೂಲಕ ಕಾರ್ಯಾತ್ಮಕವಾದ ಮತ್ತು ಶೈಕ್ಷಣಿಕ ಸುಧಾರಣೆಯ ನಡುವಿನ ಸಂಬಂಧವನ್ನು ನಿರೂಪಿಸಬಹುದು.

**ಸನ್ನಿವೇಶ 1:** ನೀವು ಕಾರ್ಯಾತ್ಮಕವಾದಿ ಮಾತ್ರ ಅಲ್ಲ, ಜೊತೆಗೆ, ಈಗಷ್ಟೇ ವಸಾಹತುಶಾಹಿ ಆಳ್ವಿಕೆಯಿಂದ ಸ್ವಾತಂತ್ರ್ಯ ಪಡೆದ ರಾಷ್ಟ್ರವೊಂದರ ಮುಖ್ಯಸ್ಥರು ಎಂದು ಕಲ್ಪಿಸಿಕೊಳ್ಳಿ. ನೀವು ಆಳುತ್ತಿರುವ ರಾಷ್ಟ್ರವು ಎರಡು ಪ್ರಮುಖ ಬುಡಕಟ್ಟು ಜನಾಂಗಗಳನ್ನು ಹೊಂದಿದೆ ಮತ್ತು ಇವು ಎರಡೂ ತಮ್ಮ ಗಾತ್ರ ಮತ್ತು ಬಲದಲ್ಲಿ ಸಾಪೇಕ್ಷವಾಗಿ ಸರಿಸಮಾನವಾಗಿವೆ. ಆದಾಗ್ಯೂ, ಈ ಎರಡೂ ಬುಡಕಟ್ಟುಗಳ ನಡುವೆ ಪರಸ್ಪರ ಶತ್ರುತ್ವದ ದೀರ್ಘ ಇತಿಹಾಸವಿದ್ದು ಬಾಹ್ಯ ವಸಾಹತುಶಾಹಿ ಆಳ್ವಿಕೆಗೆ ಪ್ರತಿರೋಧ ವ್ಯಕ್ತಪಡಿಸಿದ ಒಂದೇ ಒಂದು ಕಾರಣವು ಈ ಎರಡೂ ಬುಡಕಟ್ಟುಗಳನ್ನು ಒಂದೇ ಶಕ್ತಿಯನ್ನಾಗಿ ಒಗ್ಗೂಡಿಸಿತು. ಈ ಹೊಸ ದೇಶದ ನಾಯಕರಾಗಿ, ಮುಂದಿನ ಇಪ್ಪತ್ತು ವರ್ಷಗಳೊಳಗೆ ಉತ್ತರದಲ್ಲಿರುವ ಬುಡಕಟ್ಟು ಜನಾಂಗವು ತೀವ್ರ ಕ್ಷಾಮವನ್ನು ಎದುರಿಸುವ ಸಂದರ್ಭ ಬರುತ್ತದೆ ಎಂಬುದು ನಿಮಗೆ ಅರಿವಾಗಿದೆ, ಏಕೆಂದರೆ ನೆರೆಯ ದೇಶವು ಮೊದಲು ತನ್ನ ಪ್ರದೇಶದ ಮೂಲಕ ಹರಿದು ಹೋಗುವ ನದಿಗೆ ಅಣೆಕಟ್ಟು ಕಟ್ಟಿ ಅದು ಬೇರೆಡೆಗೆ ಹರಿಯುವಂತೆ ಮಾಡುತ್ತಿದೆ. ನಿಮ್ಮ ದೇಶದ ದಕ್ಷಿಣ ಭಾಗದಲ್ಲಿರುವ ಬುಡಕಟ್ಟು ಜನಾಂಗದ ಬಳಿ ಇರುವ ಆಹಾರ ಸಂಪನ್ಮೂಲಗಳು ಮಾತ್ರ ಉತ್ತರ ಪ್ರದೇಶವನ್ನು ಈ ಆಪತ್ತಿನಿಂದ ಪಾರು ಮಾಡಬಲ್ಲವು ಎಂಬುದು ಕೂಡ ನಿಮಗೆ ಅರಿವಿದೆ. ಈ ಆಪತ್ತಿನಿಂದ ಪಾರಾದರೆ, ಉತ್ತರದ ಬುಡಕಟ್ಟು ಪ್ರಾಂತ್ಯವು ಸಂಪದ್ಭರಿತವಾಗಿ ಒಟ್ಟು ರಾಷ್ಟ್ರದ ಸಂಪತ್ತಿಗೆ ತನ್ನ ಕೊಡುಗೆ ನೀಡಬಲ್ಲುದು. ಆದಾಗ್ಯೂ, ಎದುರಿಸಲೇ ಬೇಕಾಗಿರುವ ಅಡಚಣೆ ಏನೆಂದರೆ, ಪ್ರಸಕ್ತ ಬುಡಕಟ್ಟು ನಿಷ್ಠೆಗಳು ಅಗತ್ಯವಾಗಿ ಬೇಕಿರುವ ಸಂಪನ್ಮೂಲಗಳನ್ನು ಉತ್ತರ ಪ್ರಾಂತ್ಯದೊಂದಿಗೆ ಹಂಚಿಕೊಳ್ಳುವುದನ್ನು ಎಂದಿಗೂ ಅನುಮತಿಸುವುದಿಲ್ಲ ಎಂಬುದು. ಸಂಪನ್ಮೂಲಗಳನ್ನು ಹಂಚಿಕೊಳ್ಳದೆ ಹೊರತು ಆಪತ್ತನ್ನು ತಪ್ಪಿಸಲಾಗದು. ದತ್ತ ಸನ್ನಿವೇಶದಲ್ಲಿ, ಬುಡಕಟ್ಟು ಗುಂಪಿನ ವೈಯಕ್ತಿಕ ನಿಷ್ಠೆಯನ್ನು ರಾಷ್ಟ್ರದೆಡೆಗೆ ಹೊರಳಿಸುವುದೊಂದೇ ದಾರಿ ಎಂದು ನಿರ್ಧರಿಸಲಾಗಿದೆ. ಈ ಉದ್ದೇಶವನ್ನು ಸಾಧಿಸಲು, ನೀವು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ರಚಿಸಲು ಮತ್ತು ಮಕ್ಕಳ ಕಡ್ಡಾಯ ಹಾಜರಾತಿಗೆ ವಿಶೇಷ ಪ್ರೋತ್ಸಾಹಕಗಳನ್ನು ಕೊಡಲು ಶುರುಮಾಡುತ್ತೀರಿ. ಶಾಲಾ ಪಠ್ಯಕ್ರಮವು ಯಾವುದೇ ಬುಡಕಟ್ಟು ಜನಾಂಗದ ಧ್ಯೇಯೋದ್ದೇಶಗಳಿಗೆ ಒತ್ತು ಕೊಡುವ ಬದಲು ರಾಷ್ಟ್ರೀಯ ದ್ಯೇಯೋದ್ದೇಶಗಳಿಗೆ ಒತ್ತು ಕೊಡಲಾಗುವುದು, ಮತ್ತು ಈ ಶಾಲೆಗಳಿಂದ ತೇರ್ಗಡೆಯಾಗಿ ಬರುವ ಯಶಸ್ವಿ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಬಹುಬುಡಕಟ್ಟಿನ ವಿಶ್ವವಿದ್ಯಾಲಯದಲ್ಲಿ ಓದುವ ಅವಕಾಶವನ್ನು ಮತ್ತು ಅವರಿಗೆ ಸರ್ಕಾರದಲ್ಲಿ ನಾಯಕತ್ವದ

ಸ್ಥಾನಗಳನ್ನು ತೆಗೆದುಕೊಳ್ಳುವ ಅವಕಾಶವನ್ನು ಒದಗಿಸಲಾಗುವುದು ಎಂದು ನೀವು ಆದೇಶ ಹೊರಡಿಸುತ್ತೀರಿ. ಇದರ ಹೊರತಾಗಿ ನೀವು ಇನ್ನೇನು ಮಾಡಬಹುದು?

**ಸನ್ನಿವೇಶ 2**: ನೀವು ಜನಸಂಖ್ಯೆಯ ಬಹುಭಾಗ ವ್ಯವಸಾಯದಲ್ಲಿ ತೊಡಗಿಕೊಂಡಿರುವ ಸಮಾಜವೊಂದರ ಸರ್ಕಾರದ ನಾಯಕ ಎಂದು ಮತ್ತೊಮ್ಮೆ ಕಲ್ಪಿಸಿಕೊಳ್ಳಿ. ಆದಾಗ್ಯೂ, ಕಳೆದ ಮೂರು ದಶಕಗಳಿಂದ, ಜನರು ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿರುವುದು ಹೆಚ್ಚಾಗುತ್ತಿದೆ. ಅದೇವೇಳೆ, ಕಾರ್ಖಾನೆಗಳಲ್ಲಿ ಉತ್ಪಾದನಾ ವಿಧಾನ ಯಂತ್ರಾಧಾರಿತವಾಗುತ್ತಿರುವುದಲ್ಲದೆ, ಕೃಷಿ ಉತ್ಪಾದನೆಯೂ ಯಂತ್ರಾಧಾರಿತವಾಗುತ್ತಿದೆ. ಕಾರ್ಖಾನೆಯ ಕೆಲಸವು ವೇಗವಾಗಿ ವಿಸ್ತರಿಸುತ್ತಿರುವ ಕಾರಣ, ಹೆಚ್ಚಿನ ನಗರ ಕೆಲಸಗಾರರ ಅವಶ್ಯಕತೆಯಿದೆ. ಯಂತ್ರೀಕರಣದಿಂದಾಗಿ, ಕೃಷಿಭೂಮಿಯಲ್ಲಿ ಹೆಚ್ಚು ಹೆಚ್ಚು ಮೂಲಭೂತ ಆಹಾರೋತ್ಪನ್ನಗಳ ಹಾಗೂ ನಾರುಪದಾರ್ಥಗಳ ಉತ್ಪಾದನೆಗೆ ಬೇಕಿರುವ ಜನರ ಅಗತ್ಯ ಕಡಮೆಯಾಗುತ್ತಿದೆ. ಆದಾಗ್ಯೂ, ಜನರು ನಗರಗಳ ಕಡೆಗೆ ವಲಸೆ ಹೋಗುತ್ತಿದ್ದಂತೆ, ಕೃಷಿಭೂಮಿಗೆ ಸೂಕ್ತವಾದ ಅನೇಕ ಮೂಲ ಕೆಲಸ ಮತ್ತು ಸ್ವಚ್ಛತೆಯ ಅಭ್ಯಾಸಗಳು ಅವು ಈಗ ಕಾರ್ಯಾತ್ಮಕವಲ್ಲದಿದ್ದರೂ ನಗರದಲ್ಲಿ ಮುಂದುವರಿಯುತ್ತಿವೆ. ಬಹುತೇಕ ಹೊಸ ನಗರ ವಾಸಿಗಳಿಗೆ, ಉದಾಹರಣೆಗೆ, ಹಣಕಾಸಿನ ನಿರ್ವಹಣೆ ಒಂದು ಸಮಸ್ಯೆ. ತಮ್ಮ ಕೃಷಿಭೂಮಿಯಲ್ಲಿ, ಅವರು ತಮ್ಮ ಮೂಲಭೂತ ಅವಶ್ಯಕತೆಗಳ ಪೂರೈಕೆಗೆ ಹಲವು ಜನರ ಮೇಲೆ ಅವಲಂಬಿತರಾಗಬೇಕಾದ ಅವಶ್ಯಕತೆ ಇರಲಿಲ್ಲ. ಆದರೆ ನಗರದಲ್ಲಿ ಹಾಗಲ್ಲ. ನಗರದಲ್ಲಿ ಅಗತ್ಯ ವಸ್ತುಗಳ ಖರೀದಿಗೆ ಹಣದ ಅವಶ್ಯಕತೆ ಇದೆ. ಇದರ ಅರ್ಥ, ನಗರಕ್ಕೆ ಹೊಸದಾಗಿ ಬಂದವರು ತಮ್ಮ ಜೀವನೋಪಾಯಕ್ಕೆ ಹಣವನ್ನು ಗಳಿಸುವುದನ್ನು ಮತ್ತು ಅದನ್ನು ನಿರ್ವಹಿಸುವುದನ್ನೂ ಕಲಿಯಬೇಕಾಗುತ್ತದೆ. ಜೊತೆಗೆ, ಇಡೀ ಕುಟುಂಬದ ರಚನೆಯೇ ಬದಲಾಗುತ್ತಿದೆ, ಮತ್ತು ಯಂತ್ರಗಳು  ಬಾಲ ಕಾರ್ಮಿಕರ ಅಗತ್ಯವನ್ನು ಕಡಮೆ ಮಾಡುತ್ತಿವೆ. ಆದರೂ, ಇನ್ನೂ ಬಹಳಷ್ಟು ಮಕ್ಕಳು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಕಾರ್ಖಾನೆಗಳಿಗೆ ಹೋಗದೆ ಮನೆಯಲ್ಲೇ ಉಳಿಯುವ ಮಕ್ಕಳಿಗೆ, ತಮ್ಮ ಪೋಷಕರು ಕಾರ್ಖಾನೆಗಳಲ್ಲಿ ದುಡಿಯುವ ಸಂದರ್ಭದಲ್ಲಿ ಅವರಿಗೆ ಅಗತ್ಯವಾದ ಗಮನ ಮತ್ತು ಆರೈಕೆಯನ್ನು ನೀಡಲು ಸಂಬಂಧಿಕರು ಇರುವುದಿಲ್ಲ. ಸೂಕ್ತ ಮಾರ್ಗದರ್ಶನ ಇಲ್ಲದೆ ನಗರ ಜೀವನವು  ಹಲವು ಮಕ್ಕಳಿಗೆ ಆರೋಗ್ಯಕರವಲ್ಲದ ಪರಿಸ್ಥಿತಿಗಳನ್ನು ಸೃಷ್ಟಿಸುತ್ತಿದೆ ಮತ್ತು ಇದನ್ನು ಪರಿಹರಿಸಲು ಹೊಸ ವ್ಯವಸ್ಥೆಯ ಅಗತ್ಯವಿದೆ ಎಂದು ಹಲವರಿಗೆ ಅನಿಸಲು ತೊಡಗಿದೆ. ಆದಾಗ್ಯೂ, ಎಲ್ಲಿಯವರೆಗೆ ಬಾಲಕಾರ್ಮಿಕ ಪದ್ಧತಿ ಇರುತ್ತದೋ ಅಲ್ಲಿಯವರೆಗೆ ಅದು ಅನೇಕ ಅಗ್ಗದ ಕಾರ್ಮಿಕರು ಲಭ್ಯವಾಗುವ ಒಂದು ಮೂಲವಾಗಿರುತ್ತದೆ. ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳದಿರುವುದು ಪೈಪೋಟಿಯಲ್ಲಿ ನಷ್ಟದ ನೆಲೆಯಿಂದ ಕಾರ್ಯನಿರ್ವಹಿಸಿದಂತಾಗುತ್ತದೆ. ಶಾಲೆಗಳು ಇವೆ, ಆದರೆ ಹಲವು ಮಕ್ಕಳು ವಿವಿಧ ಕಾರಣಗಳಿಗೆ ಶಾಲೆಗೆ ಹೋಗುವುದಿಲ್ಲ. ನೀವು ಹದಿಹರೆಯದ ತನಕ ಕಡ್ಡಾಯ ಶಾಲಾ ಹಾಜರಾತಿ ಮತ್ತು ಬಾಲ ಕಾರ್ಮಿಕ ಪದ್ಧತಿಯ ನಿಷೇಧವನ್ನು ಪರಿಹಾರವನ್ನಾಗಿ ಪ್ರಸ್ತಾಪಿಸುವಿರಿ. ಹೀಗೆ ಮಾಡುವುದರಿಂದ ಯಾವುದೇ ಒಂದು ಉದ್ಯಮಕ್ಕೆ ಅನ್ಯಾಯವಾಗಿ ನಷ್ಟವಾಗುವ ಸಂಭವ ಇರುವುದಿಲ್ಲ ಮತ್ತು ಅವನತಿ ಹೊಂದುತ್ತಿರುವ ವಿಸ್ತೃತ ಕುಟುಂಬದ ಬದಲು ಇನ್ನೊಂದು ಪರ್ಯಾಯ ವ್ಯವಸ್ಥೆ ಹುಟ್ಟುಕೊಳ್ಳುತ್ತದೆ. ಈ ಸಮಾಜದಲ್ಲಿ ಈಗ ಇರುವ ಸಾಮಾಜಿಕ ಸಮಸ್ಯೆಗಳನ್ನು ನಿವಾರಿಸಲು ನೀವು ಇತರ ಯಾವ ರೀತಿಯ ಶೈಕ್ಷಣಿಕ ಸುಧಾರಣೆಗಳನ್ನು ಪ್ರಸ್ತಾಪಿಸುವಿರಿ?

**ಸನ್ನಿವೇಶ 3**: ನಿಮ್ಮ ದೇಶದಲ್ಲಿ ಹಲವು ವರ್ಷಗಳಿಂದ ಕಡ್ಡಾಯ ಶಿಕ್ಷಣ ವ್ಯವಸ್ಥೆ ಜಾರಿಯಲ್ಲಿದೆ, ಸಾಕಷ್ಟು ಹೆಚ್ಚಿನ ಪ್ರಮಾಣದ ಸಾಕ್ಷರತೆಯನ್ನು ಸಾಧಿಸಲಾಗಿದೆ, ಮತ್ತು ಹೆಚ್ಚಿನ ಜನವರ್ಗಕ್ಕೆ ಗ್ರಾಮಜೀವನದಿಂದ  ನಗರ ಜೀವನಕ್ಕೆ

ಹೊಂದಿಕೊಳ್ಳುವುದನ್ನು ಸಾಧಿಸಲಾಗಿದೆ. ಆದಾಗ್ಯೂ, ಹೊಸ ತಂತ್ರಜ್ಞಾನದಲ್ಲಿ ಮುನ್ನಡೆಗಳು ಸಾಧಿಸಲಾಗುತ್ತಿದ್ದು ಅವುಗಳಿಗೆ ಪ್ರಸ್ತುತ ವ್ಯವಸ್ಥೆಯಿಂದ ಹೊರಬರುತ್ತಿರುವ ವಿಜ್ಞಾನಿಗಳ, ಎಂಜಿನಿಯರುಗಳ, ಮತ್ತು ನಿರ್ವಾಹಕರ ಸಂಖ್ಯೆಗಿಂತ ಹೆಚ್ಚಿನ ಪ್ರಮಾಣದ ಅವಶ್ಯಕತೆ ಇದೆ. ಹಲವಾರು ವರ್ಷಗಳಿಂದ ವಿಶ್ವವಿದ್ಯಾಲಯಗಳು ಕೇವಲ ಉಳ್ಳವರಿಗಷ್ಟೆ ಲಭ್ಯವಾಗುತ್ತಿದ್ದು ಅಂತಹ ಗುಂಪುಗಳ ಮಕ್ಕಳಿಗೆ ಮಾತ್ರ ತಮ್ಮ ಕೌಟುಂಬಿಕ ಸ್ಥಾನಮಾನ ಉಳಿಸಿಕೊಳ್ಳಲು ಅವಶ್ಯವಾದ ನಯನಾಜೂಕು, ಕೌಶಲಗಳನ್ನು ಒದಗಿಸಿವೆ. ಆದಾಗ್ಯೂ, ಹೊಸ ಬೇಡಿಕೆಗಳನ್ನು ಪೂರೈಸದೆ ಹೋದರೆ, ಹೊರದೇಶಗಳು ಒಡ್ಡುತ್ತಿರುವ ಸ್ಪರ್ಧೆ ನಿಮ್ಮ ದೇಶದ ಬಾಹ್ಯ ಮಾರುಕಟ್ಟೆಗಳನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳುವುದಷ್ಟೇ ಅಲ್ಲದೆ ನಿಮ್ಮ ದೇಶೀಯ ಮಾರುಕಟ್ಟೆಗೆ ಕೂಡ ಕನ್ನ ಹಾಕುವ ಸಾಧ್ಯತೆ ಇದೆ. ನಿಮ್ಮ ದೇಶದ ಅಗತ್ಯತೆಗಳನ್ನು ಪೂರೈಸಲು ಹೇರಳವಾದ ಪ್ರತಿಭೆ ನಿಮ್ಮ ಸಾಮಾನ್ಯ ಜನವರ್ಗದಲ್ಲೇ ಕಂಡುಕೊಳ್ಳಬಹುದು, ಎಂದು ನಿಮ್ಮ ಶೈಕ್ಷಣಿಕ ಸಲಹೆಗಾರರು ನಿಮಗೆ ಭರವಸೆ ನೀಡಿದ್ದಾರೆ. ದುರಾದೃಷ್ಟವಶಾತ್, ಅಂತಹ ಪ್ರತಿಭೆಗಳನ್ನು ಗುರುತಿಸಲು ನಿಮಗಿರುವ ದಾರಿಗಳು ವಿರಳ ಮತ್ತು ಉನ್ನತ ಶಿಕ್ಷಣಕ್ಕೆ ಲಭ್ಯ ಇರುವ ಸಂಪನ್ಮೂಲಗಳು ಈ ಪ್ರತಿಭೆಗಳನ್ನು ತರಬೇತುಗೊಳಿಸಲು ಬೇಕಾಗುವಷ್ಟಿಲ್ಲ. ನೀವು ದೇಶದ ಪ್ರಮುಖ ಶಿಕ್ಷಣ ತಜ್ಞರ ಸಭೆಯನ್ನು ಕರೆಯುವುದರ ಮೂಲಕ ಸ್ಪಂದಿಸಿ ಆ ಸಭೆಯಲ್ಲಿ ಉನ್ನತ ಶಿಕ್ಷಣದಿಂದ ಲಾಭ ಪಡೆದುಕೊಳ್ಳಬಹುದಾದ ಸಮಾಜದಲ್ಲಿನ ಎಲ್ಲಾ ಜನವರ್ಗದ ಪ್ರತಿಭಾವಂತ ಮಕ್ಕಳನ್ನು ಗುರುತಿಸಲು ಬಳಸಬಹುದಾದಂತಹ ಒಂದು ನ್ಯಾಯಯುತ ರಾಷ್ಟ್ರೀಯ ಪರೀಕ್ಷಾ ವ್ಯವಸ್ಥೆಯನ್ನು ರೂಪಿಸಲು ನಿರ್ಧಾರ ತೆಗೆದುಕೊಳ್ಳಲಾಗುತ್ತದೆ. ಇದರ ಜೊತೆಗೆ, ವಿಜ್ಞಾನ, ಗಣಿತ, ಎಂಜಿನಿಯರಿಂಗ್ ಮತ್ತು ವಾಣಿಜ್ಯ ವ್ಯವಹಾರಕ್ಕೆ ಹೆಚ್ಚಿನ ಒತ್ತು ಕೊಡುವುದರ ಮೂಲಕ ಮತ್ತು ಈ ಕ್ಷೇತ್ರಗಳಲ್ಲಿ ಸ್ಥಿರವಾಗಿ ಜ್ಞಾನದ ಬೆಳವಣಿಗೆಯನ್ನು ಖಚಿತಪಡಿಸುವಂತಹ ಪದವಿ ಹಂತದ ಸಂಶೋಧನಾ ಕಾರ್ಯಕ್ರಮಗಳನ್ನು ಪರಿಚಯಿಸುವುದರ ಮೂಲಕ ತಮ್ಮ ಪಠ್ಯಕ್ರಮವನ್ನು ಪರಿಷ್ಕರಿಸುವುದಾಗಿ ಉನ್ನತ ಶಿಕ್ಷಣ ತಜ್ಞರು ಆಶ್ವಾಸನೆ ಕೊಡುತ್ತಾರೆ. ನೀವು ಈ ಪ್ರಸ್ತಾಪಗಳನ್ನು ಅನುಮೋದಿಸಿ ಅವುಗಳಿಗೆ ಹಣಕಾಸು ಬಿಡುಗಡೆ ಮಾಡಲು ಒಪ್ಪಿಕೊಳ್ಳುತ್ತೀರಿ.

ಮೇಲಿನ ಮೂರು ಸನ್ನಿವೇಶಗಳು ಕಾಲ್ಪನಿಕ: ಅವು ಯಾವುದೇ ಒಂದು ದೇಶದ ಅನುಭವವನ್ನು ವಿವರಿಸುವ ಪ್ರಯತ್ನ ಮಾಡುತ್ತಿಲ್ಲ. ಆದಾಗ್ಯೂ, ಅವು ಮೂರು ಕೂಡಾ ರಾಷ್ಟ್ರೀಯ ಕಡ್ಡಾಯ ಶಿಕ್ಷಣದ ಸ್ಥಾಪನೆ, ನಿರ್ವಹಣೆ ಮತ್ತು ಬದಲಾವಣೆಯ ಕುರಿತಂತೆ ಕಾರ್ಯಾತ್ಮಕವಾದಿ ಯೋಚನಾ ವಿಧಾನವನ್ನು ಪ್ರತಿನಿಧಿಸುತ್ತವೆ. ಮೇಲೆ ಕೊಟ್ಟಿರುವ ಸನ್ನಿವೇಶಗಳಲ್ಲಿ, ಕನಿಷ್ಟ ಪಕ್ಷ ಮೂರು ಕಾರ್ಯಗಳನ್ನು ಪ್ರತಿನಿಧಿಸಲಾಗಿದೆ. ಮೊದಲನೆಯ ಸನ್ನಿವೇಶದಲ್ಲಿ, ಶಾಲಾ ಶಿಕ್ಷಣ ವ್ಯವಸ್ಥೆಯು ಒಂದು ಏಕೈಕ, ರಾಷ್ಟ್ರೀಯ ಅಸ್ಮಿತೆಯನ್ನು ಸ್ಥಾಪಿಸಲು ನೆರವಾಗುವ ಕಾರ್ಯನಿರ್ವಹಿಸುತ್ತದೆ ಮತ್ತು ಆ ಮೂಲಕ ವಿರುದ್ಧವಾಗಿರುವ ಬುಡಕಟ್ಟು ನಿಷ್ಠೆಗಳು ಸೃಷ್ಟಿಸುತ್ತಿರುವ ಸಂಘರ್ಷವನ್ನು ತೊಡೆದುಹಾಕಲು ಅದನ್ನು ಬಳಸಲಾಗುತ್ತದೆ. ಇನ್ನೊಂದರ್ಥದಲ್ಲಿ ಹೇಳುವುದಾದರೆ, ಅದು ಸಾಮಾಜಿಕ ಏಕೀಕರಣದ ಕಾರ್ಯವನ್ನು ನಿರ್ವಹಿಸುತ್ತಿದೆ. ಎರಡನೆಯ ಸನ್ನಿವೇಶದಲ್ಲಿ, ಬದಲಾಗುತ್ತಿರುವ ಕಾಲವು ಬೇಡುವ ಹೊಸ ಅಭ್ಯಾಸ ಮತ್ತು ಧೋರಣೆಗಳನ್ನು ಬೆಳೆಸುವ ಸಲುವಾಗಿ ಶಾಲಾ ಶಿಕ್ಷಣವನ್ನು ಕಡ್ಡಾಯಗೊಳಿಸಲಾಗಿದೆ. ಇಲ್ಲಿ ಅದು ಸಾಮಾಜಿಕ ಮರು-ಏಕೀಕರಣದ ಕಾರ್ಯವನ್ನು ನಿರ್ವಹಿಸುತ್ತಿದೆ ಎಂದು ಹೇಳಬಹುದು. ಮೂರನೆಯ ಸನ್ನಿವೇಶದಲ್ಲಿ, ಅಂತರಾಷ್ಟ್ರೀಯ ಸ್ಪರ್ಧೆ ಒಡ್ಡುತ್ತಿರುವ ಸವಾಲುಗಳನ್ನು ಎದುರಿಸಲು ಉನ್ನತ-ಮಟ್ಟದ ಕೌಶಲಗಳನ್ನು ಒದಗಿಸುವ ಸಲುವಾಗಿ ಶೈಕ್ಷಣಿಕ ವ್ಯವಸ್ಥೆಯನ್ನು ಸುಧಾರಿಸಲಾಗುವುದು ಅಥವಾ ವ್ಯವಸ್ಥಿತಗೊಳಿಸಲಾಗುವುದು. ಇನ್ನೊಂದರ್ಥಲ್ಲಿ ಹೇಳುವುದಾದರೆ, ಅದನ್ನು ಸಮಾಜದ ಎಲ್ಲಾ ವರ್ಗಗಳಿಂದ ಪ್ರತಿಭೆಯನ್ನು ಗುರುತಿಸಲು ಮತ್ತು ಉನ್ನತ-ಮಟ್ಟದ ಕೌಶಲಗಳು ಬೇಡುವ ತರಬೇತಿಯನ್ನು ಒದಗಿಸಲು ಬಳಸಲಾಗುವುದು. ಈ ಸನ್ನಿವೇಶದಲ್ಲಿ, ಶಾಲೆಯು ಪಾತ್ರ-ಭಿನ್ನತೆಯ ಕಾರ್ಯವನ್ನು ನಿರ್ವಹಿಸುತ್ತಿದೆ. ಈ

ಚರ್ಚೆಯನ್ನು ಮುಂದುವರಿಸುವ ಮೊದಲು, ನೀವು ಅಧ್ಯಾಯ 8ರಲ್ಲಿ ಕೊಟ್ಟಿರುವ "ರಾಷ್ಟ್ರೀಯ ಶಿಕ್ಷಣ ವರದಿ" ಗಳ ಕುರಿತಂತೆ ಇರುವ ವಿವಾದವನ್ನು ಪರಿಗಣಿಸಲು ಬಯಸಬಹುದು.

**ಸ್ವಾಂಗೀಕರಣ, ರಾಜಕೀಯ ಸಾಮಾಜೀಕರಣ ಮತ್ತು ಆಧುನೀಕರಣ**

ಹಲವು ಶೈಕ್ಷಣಿಕ ಸುಧಾರಕರು, ಕಾರ್ಯಾತ್ಮಕವಾದ ನೆಲೆಯಲ್ಲಿ ವಾದಿಸುತ್ತಾ, ಶಾಲೆಯನ್ನು ನಮ್ಮ ಆಧುನಿಕ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಬದುಕಿನ ಬೇಡಿಕೆಗಳನ್ನು ಪೂರೈಸಲು ಸಮಾಜ ಬಳಸುವ ಮೂಲಭೂತ ಸಾಧನವನ್ನಾಗಿ ಪರಿಗಣಿಸುತ್ತಾರೆ. ವಿಶೇಷವಾಗಿ, ಶಾಲೆಗಳು ವಿದ್ಯಾರ್ಥಿಗಳಿಗೆ ಪ್ರಜಾಸತ್ತಾತ್ಮಕ ತತ್ವಗಳ ಪ್ರಕಾರ ನಡೆದುಕೊಳ್ಳಲು, ವೈವಿಧ್ಯತೆಯನ್ನು ಸಹಿಸಲು ಮತ್ತು ವಿಶೇಷಜ್ಞ, ಅತ್ಯಂತ ತಾಂತ್ರಿಕವಾದ ಆರ್ಥಿಕತೆಯಲ್ಲಿ ಕಾರ್ಯನಿರ್ವಹಿಸಲು ಕಲಿಸಬೇಕು, ಎಂದು ಅವರು ವಾದಿಸುತ್ತಾರೆ. ಈ ಮೇಲಿನ ಮೂರು ರಾಜಕೀಯ, ಸಾಮಾಜಿಕ ಆರ್ಥಿಕ ಗುರಿಗಳಿಗೆ ಒಬ್ಬ ವ್ಯಕ್ತಿಯು ತನ್ನ ವೈಯಕ್ತಿಕ ಅರ್ಹತೆಯ ಮೇರೆಗೆ ಪ್ರತಿಫಲವನ್ನು ನಿರೀಕ್ಷಿಸಬೇಕು ಎನ್ನುವುದನ್ನು ಸೇರಿಸಿದರೆ ನಮಗೆ ಆಧುನಿಕ, ಕಾರ್ಯತತ್ಪರ ಮತ್ತು ಅರ್ಹತೆ ಆಧಾರಿತ ಸಮಾಜವೊಂದನ್ನು ರೂಪಿಸಲು ಮತ್ತು ಮುಂದುವರಿಸಿಕೊಂಡು ಹೋಗಲು ಅಗತ್ಯವಾದ ಮೂಲಭೂತ ಅಂಶಗಳು ದೊರಕುತ್ತವೆ. ಶಾಲೆಯ ಈ ಸಾಮಾಜಿಕ ಕಾರ್ಯದ ಗ್ರಹಿಕೆಗೆ ಸಂಬಂಧಿಸಿದಂತೆ ಮೂರು ಪ್ರಕ್ರಿಯೆಗಳಿವೆ. ಇವು ಸಾಂಸ್ಕೃತಿಕ ಸ್ವಾಂಗೀಕರಣ, ರಾಜಕೀಯ ಸಾಮಾಜೀಕರಣ, ಮತ್ತು ಆಧುನೀಕರಣದ ಪ್ರಕ್ರಿಯೆಯಲ್ಲಿ ಶಾಲೆಯು ವಹಿಸುವ ಪಾತ್ರ. ಈ ಮೂರು ಪ್ರಕ್ರಿಯೆಗಳ ಪೈಕಿ ಸ್ವಾಂಗೀಕರಣ ಮತ್ತು ರಾಜಕೀಯ ಸಾಮಾಜೀಕರಣದ ಪ್ರಕ್ರಿಯೆಗಳು ಸಾಮಾಜಿಕ ಏಕೀಕರಣ ಮತ್ತು ಒಗ್ಗಟ್ಟಿನ ಬಗ್ಗೆ ಕಾರ್ಯಾತ್ಮಕವಾದಿಗಳು ಹೊಂದಿರುವ ದೃಷ್ಟಿಕೋನದೊಂದಿಗೆ ನಿಕಟ ಸಂಬಂಧ ಹೊಂದಿದ್ದರೆ, ಮೂರನೆಯ ಪ್ರಕ್ರಿಯೆಯಾದ ಆಧುನೀಕರಣವು ಪಾತ್ರ ಭಿನ್ನತೆ ಮತ್ತು ಬೆಳವಣಿಗೆಯ ಸಿದ್ಧಾಂತದ ಬಗ್ಗೆ ಅವರು ಹೊಂದಿರುವ ದೃಷ್ಟಿಕೋನಕ್ಕೆ ಸಂಬಂಧ ಹೊಂದಿದೆ.

ಸ್ವಾಂಗೀಕರಣ ಎಂಬುದು ಒಂದು ಸಾಂಸ್ಕೃತಿಕ ಪರಿಕಲ್ಪನೆ. ಅದು ಒಂದು ಗುಂಪು, ಸಾಮಾನ್ಯವಾಗಿ ಅಧೀನ ಗುಂಪು, ಮತ್ತೊಂದು ಗುಂಪಿನ ಸಂಸ್ಕೃತಿಯಲ್ಲಿ, ಸಾಮಾನ್ಯವಾಗಿ ಪ್ರಬಲ ಗುಂಪು, ಪ್ರತ್ಯೇಕಿಸಲಾಗದ ರೀತಿಯಲ್ಲಿ ಬೆರೆತುಹೋಗುವುದನ್ನು ಸೂಚಿಸುತ್ತದೆ. ಒಂದು ಗುಂಪು ಪ್ರಬಲ ಗುಂಪಿನ ವೇಷಭೂಷಣ, ಭಾಷೆ, ಅಭಿರುಚಿಗಳು, ಧೋರಣೆಗಳು ಮತ್ತು ಆರ್ಥಿಕ ಸ್ಥಾನಮಾನವನ್ನು ಮೈಗೂಡಿಸಿಕೊಂಡು ಅನುಸರಿಸಿದಾಗ ಸ್ವಾಂಗೀಕರಣದ ಪ್ರಕ್ರಿಯೆ ಸಂಭವಿಸುತ್ತದೆ. ರಾಜಕೀಯ ಸಾಮಾಜೀಕರಣ ಎಂಬುದು ಮೂಲತಃ ಒಂದು ರಾಜಕೀಯ ಪರಿಕಲ್ಪನೆ. ಅದು, ಎರಡನೆಯದಾಗಿ, ಒಂದು ಮಾನಸಿಕ ಪ್ರಕ್ರಿಯೆ ಕೂಡ. ಆಧುನಿಕ ಸಮಾಜದ ಸಂದರ್ಭದಲ್ಲಿ, ರಾಜಕೀಯ ಸಾಮಾಜೀಕರಣವು ವ್ಯಕ್ತಿಯೊಬ್ಬ ತನ್ನ ರಾಜಕೀಯ ನಿಷ್ಠೆಯನ್ನು ಸ್ಥಳೀಯ ಗುಂಪನ್ನು ಮೀರಿ ಇಡೀ ರಾಷ್ಟ್ರವನ್ನು ಒಳಗೊಳ್ಳುವಂತೆ ವಿಸ್ತರಿಸಿಕೊಳ್ಳುವ ಪ್ರಕ್ರಿಯೆಯನ್ನು ಸೂಚಿಸುತ್ತದೆ. ಅಲ್ಲದೆ ಅದು ವ್ಯಕ್ತಿಯೊಬ್ಬ ಆಧುನಿಕ ಪ್ರಜಾಸತ್ತಾತ್ಮಕ ಸ್ವರೂಪದ ಸರ್ಕಾರವು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ಒಪ್ಪಿಕೊಳ್ಳುವ ಪ್ರಕ್ರಿಯೆಯನ್ನು ಕೂಡ ಸೂಚಿಸುತ್ತದೆ. ಆಧುನೀಕರಣ ಎಂಬುದು ಒಂದು ಆರ್ಥಿಕ ಮತ್ತು ಸಾಮಾಜಿಕ ಪರಿಕಲ್ಪನೆ ಎರಡೂ ಕೂಡ. ಅದು ಆಧುನಿಕ ಸಮಾಜದೊಂದಿಗೆ ತಳಕುಹಾಕಿಕೊಂಡಿರುವ ಅರ್ಹತೆ ಆಧಾರಿತ, ಅಧಿಕಾರಶಾಹಿ, ಮತ್ತು ವ್ಯಕ್ತಿ ಸ್ವಾತಂತ್ರ್ಯದ ಜೀವನಶೈಲಿಯ ಬೆಳವಣಿಗೆಯನ್ನು ಸೂಚಿಸುತ್ತದೆ ಮತ್ತು ಅದನ್ನು ಒಂದು ದೇಶದ ತಾಂತ್ರಿಕ ಮತ್ತು ಆರ್ಥಿಕ ಬೆಳವಣಿಗೆಗೆ ಪೂರ್ವಾಪೇಕ್ಷಿತ ಅಂಶಗಳಾಗಿ ಪರಿಗಣಿಸಲಾಗುತ್ತದೆ.

ಈ ಮೂರು ಪ್ರಕ್ರಿಯೆಗಳು ಒಂದನೊಂದು ಅತಿಕ್ರಮಿಸುತ್ತವೆ. ಉದಾಹರಣೆಗೆ, ಇತರ ವಿಷಯಗಳನ್ನೂ ಒಳಗೊಂಡಂತೆ, ಸ್ವಾಂಗೀಕರಣದ ಪ್ರಕ್ರಿಯೆಯು ಹೊಸದಾಗಿ ಹುಟ್ಟಿಕೊಂಡ ಗುಂಪುಗಳ ಸದಸ್ಯರ ಬಯಕೆಗಳಲ್ಲಿ ಬದಲಾವಣೆ ಆಗುವುದನ್ನು ಒಳಗೊಳ್ಳುತ್ತದೆ. ಆಧುನೀಕರಣವು ಅಂತಹದೊಂದು ಬದಲಾವಣೆಯನ್ನು ಮೊದಲೇ

ನಿರೀಕ್ಷಿಸಿರುತ್ತದೆ. ಅದೇನೇ ಇದ್ದರೂ, ಅರ್ಹತಾಶಾಹಿ ವ್ಯವಸ್ಥೆಯು ಜನರು ಅದು ನೀಡುವ ಪ್ರತಿಫಲಗಳನ್ನೇ ಬಯಸುತ್ತಾರೆ ಎಂಬ ಅಂಶವನ್ನು ಅವಲಂಬಿಸಿರುತ್ತದೆ. ಹಾಗೆಯೇ, ರಾಜಕೀಯ ಸಾಮಾಜೀಕರಣವನ್ನು ಸ್ವಾಂಗೀಕರಣ ಪ್ರಕ್ರಿಯೆಯ ಒಂದು ಹೆಚ್ಚು ನಿರ್ದಿಷ್ಟ ವಿಷಯವನ್ನಾಗಿ ನೋಡಬಹುದು. ಈ ಪ್ರಕ್ರಿಯೆಗಳು ಒಂದರ ಮೇಲೊಂದು ಅತಿಕ್ರಮಿಸಿಕೊಂಡಿದ್ದರೂ, ಅವುಗಳನ್ನು ನಾವು ಪ್ರತ್ಯೇಕವಾಗಿ ಕೂಡ ನೋಡಬಹುದು. ಈ ವಿಭಾಗದಲ್ಲಿ, ಶೈಕ್ಷಣಿಕ ಸುಧಾರಣೆ ಮತ್ತು ಸ್ವಾಂಗೀಕರಣ ಮತ್ತು ರಾಜಕೀಯ ಸಾಮಾಜೀಕರಣ ಎಂಬ ಅವಳಿ ಪ್ರಕ್ರಿಯೆಗಳ ನಡುವಿನ ಸಂಬಂಧವನ್ನು ಮೊದಲು ವಿಶ್ಲೇಷಿಸಿ, ನಂತರ ಶೈಕ್ಷಣಿಕ ಸುಧಾರಣೆ ಮತ್ತು ಆಧುನೀಕರಣವನ್ನು ಪರಿಗಣಿಸುತ್ತೇವೆ.

ಈ ಶತಮಾನದ ಆರಂಭದಲ್ಲಿ ಇಂಗ್ಲಿಷೇತರ ಪ್ರದೇಶಗಳಿಂದ ಅಮೇರಿಕಾ ಸಂಯುಕ್ತ ಸಂಸ್ಥಾನಕ್ಕೆ ವಲಸಿಗರ ಸಂಖ್ಯೆ ಹೆಚ್ಚಾದಂತೆ, ಅಲ್ಲಿಯ ಶೈಕ್ಷಣಿಕ ಸುಧಾರಕರು ಈ ಹೊಸ ಗುಂಪುಗಳನ್ನು "ಅಮೇರಿಕದ ಜೀವನ ಶೈಲಿ" ಯೊಂದಿಗೆ ಸಮೀಕರಿಸಲು ಶಾಲೆಗಳನ್ನು ಪ್ರಮುಖ ಸಾಧನಗಳನ್ನಾಗಿ ಪರಿಗಣಿಸಿದರು. ಆದಾಗ್ಯೂ, ಈ ಸಮೀಕರಣ ಯಾವ ಸ್ವರೂಪದ್ದಾಗಿರಬೇಕು ಎಂಬ ಬಗ್ಗೆ ಜನರಲ್ಲಿ ಭಿನ್ನಾಭಿಪ್ರಾಯವಿತ್ತು. ಉತ್ತರ ಮತ್ತು ಪಶ್ಚಿಮ ಯುರೋಪಿನ ಜೀವನ ಮೌಲ್ಯಗಳು ಅಮೇರಿಕಾದ ಸಂಸ್ಕೃತಿಯ ಕಲ್ಪನೆಗಳೊಂದಿಗೆ ಈಗಾಗಲೇ ಹೆಚ್ಚಿನ ಸಾಮ್ಯತೆಯನ್ನು ಹೊಂದಿವೆ ಎಂದು ಭಾವಿಸಿದುದ್ದರಿಂದ ಅವರನ್ನು ಮಾತ್ರ ಒಳ ಸೇರಿಸಿಕೊಳ್ಳಬೇಕು, ಎಂದು ಕೆಲವರು ವಾದಿಸಿದರು. ಇತರರು, ಶಾಲೆಗಳು ಹೊಸ ವಲಸಿಗರ ಮೂಲ ಸಾಂಸ್ಕೃತಿಕ ರೀತಿನೀತಿಗಳನ್ನು "ಅಳಿಸಿ ಹಾಕಿ" ಮತ್ತು ಅವರ ಮೇಲೆ "ಅಮೇರಿಕದ ಜೀವನ ಶೈಲಿ" ಗೆ ಅನುಗುಣವಾದ ಮಾನದಂಡಗಳನ್ನು ಹೇರಲು ಸಮರ್ಥವಾಗಿದೆ ಎಂದು ನಿರೂಪಿಸಿದರೆ ಮಾತ್ರ ಇತರ ದೇಶಗಳ ವಲಸಿಗ ಗುಂಪುಗಳಿಗೆ ತೆರೆದುಕೊಳ್ಳಬಹುದು, ಎಂದು ಅಭಿಪ್ರಾಯಪಟ್ಟರು. ಇನ್ನು ಕೆಲವು ಸುಧಾರಕರು, ಪ್ರತಿಯೊಂದು ಹೊಸ ಸಂಸ್ಕೃತಿಗೂ ತನ್ನದೇ ಆದ ಅನನ್ಯ ಕೊಡುಗೆಯನ್ನು ಅಮೇರಿಕಾದ ಸಂಸ್ಕೃತಿಗೆ ಕೊಡಬಲ್ಲುದು ಮತ್ತು ಸಾಂಸ್ಕೃತಿಕ ಅಸ್ಮಿತೆಯನ್ನು ಶಾಲೆಗಳಲ್ಲಿ ಪೋಷಿಸಬೇಕು, ಎಂದು ವಾದಿಸಿದರು. ಮುಂದುವರಿದು, ಪ್ರತಿಯೊಂದು ವಿದ್ಯಾರ್ಥಿಯಲ್ಲಿ ಒಂದು ಬಹುತ್ವ ಸಮಾಜದ ಆದರ್ಶದ ಬಗ್ಗೆ ಬದ್ಧತೆಯನ್ನು ಬೆಳೆಸುವುದು ಶಾಲೆಯ ಜವಾಬ್ದಾರಿಯಾಗಬೇಕು, ಎಂದು ಇವರು ಪ್ರತಿಪಾದಿಸಿದರು. ಸಾಮಾಜಿಕ ಏಕೀಕರಣ ಯಾವ ರೂಪ ತಳೆಯಬೇಕು ಎಂಬ ಬಗ್ಗೆ ವಿವಿಧ ಅಭಿಪ್ರಾಯಗಳಿದ್ದರೂ, ರಾಜಕೀಯ ಮತ್ತು ತಾಂತ್ರಿಕತೆಗೆ ಸಂಬಂಧಿಸಿದ ವಿಷಯಗಳು ಹೊಸ ಮಾದರಿಯ ಸಮೀಕರಣವನ್ನು ಬೇಡುತ್ತವೆ ಎಂಬ ಬಗ್ಗೆ ಒಮ್ಮತವಿತ್ತು.

ಹಲವು ಶೈಕ್ಷಣಿಕ ಸುಧಾರಕರು, ಹೊಸ ಗುಂಪುಗಳನ್ನು ಈಗಿರುವ ಸಂಸ್ಕೃತಿಯಲ್ಲಿ ಸಮೀಕರಿಸಲು ಮತ್ತು ಪ್ರಜಾಸತ್ತಾತ್ಮಕ ತತ್ವಗಳಿಗೆ ಒಂದು ಸಮಾನ ನಿಷ್ಠೆಯನ್ನು ಬೆಳೆಸಲು ಶಾಲೆಯ ಕಡೆ ನೋಡಿದರು. ಈ ಕಾರ್ಯವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು ಹೇಗೆ ಎಂಬ ಬಗ್ಗೆ ಶಿಕ್ಷಣ ತಜ್ಞರಲ್ಲಿ, ರಾಜಕೀಯ ನಾಯಕರಲ್ಲಿ ಮತ್ತು ಸಾರ್ವಜನಿಕರ ನಡುವೆ ಸಾಕಷ್ಟು ಭಿನ್ನ ಅಭಿಪ್ರಾಯಗಳು ಇನ್ನೂ ಇವೆ. ಕೆಲವರು ಅಮೇರಿಕದ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾದ ರಾಜಕೀಯ ಸಿದ್ಧಾಂತಗಳ ವಿರುದ್ಧ ಶಾಲೆಗಳು ನೇರ ದಾಳಿಯನ್ನು ನಡೆಸಬೇಕು ಎಂದು ನಂಬುತ್ತಾರೆ. ಹಾಗಾಗಿ ಅಮೇರಿಕಾ ಸಂಯುಕ್ತ ಸಂಸ್ಥಾನದ ಹಲವು ರಾಜ್ಯ ಸರ್ಕಾರಗಳು "ಕಮ್ಯುನಿಸಮ್ನ ಕಡುಕುಗಳು" ಎಂಬ ವಿಷಯವನ್ನು ಶಾಲೆಗಳಲ್ಲಿ ಬೋಧಿಸುವಂತೆ ಆದೇಶಿಸುವ ಕಾನೂನುಗಳನ್ನು ಹೊರಡಿಸಿವೆ. ಇತರರು, ಶಾಲೆಗಳು ತಮ್ಮ ರಚನೆ ಮತ್ತು ಪಠ್ಯಕ್ರಮಗಳಲ್ಲಿ ಪ್ರಜಾಸತ್ತಾತ್ಮಕ ಜೀವನ ಕ್ರಮಗಳ ಪ್ರಮುಖ ಅಂಶವಾಗಿರುವ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ಪ್ರತಿಬಿಂಬಿಸಬೇಕು ಎಂದು ವಾದಿಸುತ್ತಾರೆ. ವಿದ್ಯಾರ್ಥಿ ಸರ್ಕಾರಕ್ಕೆ ಪ್ರೋತ್ಸಾಹ ಇಂತಹ ದೃಷ್ಟಿಕೋನಕ್ಕೆ ಪೂರಕವಾಗಿ ಜಾರಿಬಂದ ವ್ಯವಸ್ಥೆ. ವಿದ್ಯಾರ್ಥಿಗಳು ತಮ್ಮ ಸ್ವಂತ ಶೈಕ್ಷಣಿಕ ಕಾರ್ಯಕ್ರಮಗಳ ಯೋಜನೆ ಮತ್ತು ಅವುಗಳನ್ನು ರೂಪಿಸುವಲ್ಲಿ ಇನ್ನೂ ಹೆಚ್ಚು ಸಂಪೂರ್ಣವಾಗಿ ಭಾಗವಹಿಸುವಂತಿರಬೇಕು ಎಂದು ಇನ್ನು ಕೆಲವರು ಪ್ರಸ್ತಾಪಿಸಿರುವರು. ಈ ಎಲ್ಲ ಭಿನ್ನಮತಗಳ

ಹೊರತಾಗಿಯೂ, ಹಲವರ ಮಧ್ಯೆ, ಶಿಕ್ಷಣ ಕ್ಷೇತ್ರದ ಒಳಗೆ ಮತ್ತು ಹೊರಗೆ, ಎಳೆಯರ ರಾಜಕೀಯ ಸಮಾಜೀಕರಣದಲ್ಲಿ ಶಾಲೆಗಳು ವಹಿಸಬೇಕಾದ ಪ್ರಮುಖ ಪಾತ್ರದ ಬಗ್ಗೆ ಒಮ್ಮತ ಇದೆ.

ರಾಜಕಿಯ ನಿರ್ಧಾರಗಳನ್ನು ಹೇಗೆ ಮಾಡಲಾಗುತ್ತದೆ ಎಂಬ ಬಗ್ಗೆ ಹೆಚ್ಚಿನ ಮಾಹಿತಿ ಸಾರ್ವಜನಿಕರಿಗೆ ಸಿಗದೆ ಇರುವಂತಹ ದೊಡ್ಡ ಕೈಗಾರಿಕಾ ಸಮಾಜಗಳಲ್ಲಿ, ಶಾಲೆಗಳಲ್ಲಿ ರಾಜಕೀಯ ಸಾಮಾಜೀಕರಣವು ವಿಶೇಷ ಮಹತ್ವ ಹೊಂದಿದೆ. ಉದಾಹರಣೆಗೆ, ಒಂದು ಸರ್ಕಾರವು ತೆರಿಗೆ ಏರಿಸಲು, ಯುದ್ಧ ನಡೆಸಲು, ಅಥವಾ ಒಂದು ಶಾಲೆಯನ್ನು ವಿಲೀನಗೊಳಿಸಲು ನಿರ್ಧರಿಸುವ ಸಂದರ್ಭದಲ್ಲಿ, ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ತನ್ನ ಪೌರಪ್ರಜೆಯಿಂದ ಒಂದು ಸಾಮಾನ್ಯ ಸ್ವೀಕಾರದ ಅಗತ್ಯವಿದೆ.  ಮೊದಲನೆಯದಾಗಿ, ಸಾರ್ವಜಿನಕರು ತಮ್ಮ ಸರ್ಕಾರವು ಸಾಮಾನ್ಯ ಜನಸಂಖ್ಯೆಯ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದೆ ಎಂದು ನಂಬುವುದನ್ನು ಬೇಡುತ್ತದೆ. ಎರಡನೆಯದಾಗಿ, ತಮ್ಮ ಸರ್ಕಾರ ಸದುದ್ದೇಶದಿಂದ ಕಾರ್ಯನಿರ್ವಹಿಸುತ್ತಿದೆ ಎಂದು ಸಾರ್ವಜಿನಕರು ನಂಬುವುದನ್ನು ಬೇಡುತ್ತದೆ. ಮತ್ತು ಮೂರನೆಯದಾಗಿ, ತನ್ನ ಇಚ್ಛಾಸಂಕಲ್ಪವನ್ನು ವಿಧಿಸಲು ಸರ್ಕಾರಕ್ಕೆ ಬೆಂಬಲ ಮತ್ತು ಅಧಿಕಾರವಿದೆ ಎಂದು ಪ್ರತಿಯೊಬ್ಬರೂ ನಂಬುವುದನ್ನು ಬೇಡುತ್ತದೆ. ಈ ಅವಶ್ಯಕತೆಗಳ ಪೈಕಿ ಮೊದಲನೆಯದರ ಅರ್ಥ, ಮುಂದಕ್ಕೆ ಪೌರ ವ್ಯಕ್ತಿಗಳಾಗಿ ಬೆಳೆಯುವ ವಿದ್ಯಾರ್ಥಿಗಳಿಗೆ ರಾಜಕೀಯ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಮತ್ತು ಕಾನೂನುಗಳನ್ನು ರೂಪಿಸುವ ಪ್ರಕ್ರಿಯೆಯಲ್ಲಿ ತಮ್ಮ ನಂಬಿಕೆ ಬೆಳೆಸಿಕೊಳ್ಳಬೇಕು. ಎರಡನೆಯದು ಜನರಿಗೆ ಸರ್ಕಾರಿ ಅಧಿಕಾರಿಗಳಲ್ಲಿ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿ ಕನಿಷ್ಠವಾದರೂ ನಂಬಿಕೆ ಇರಬೇಕು ಎನ್ನುವುದನ್ನು ಬೇಡುತ್ತದೆ. ಮೂರನೆಯದು ಮೇಲೆ ಮೊದಲ ಎರಡು ಅಂಶಗಳಲ್ಲಿ ಉಲ್ಲೇಖಿಸಿದ ಆ ತರೆನಾದ ನಂಬಿಕೆಯನ್ನು ಸಮಾಜದಲ್ಲಿನ ಬಹುತೇಕ ಇತರ ಜನರು ಹೊಂದಿದ್ದು ಮತ್ತು ಆದ್ದರಿಂದ ಅವರು ತಮ್ಮ ಸರ್ಕಾರದ ಆದೇಶಗಳನ್ನು ಪಾಲಿಸುತ್ತಾರೆ ಎಂದು ವಿದ್ಯಾರ್ಥಿಗಳು ನಂಬುವುದನ್ನು ಬೇಡುತ್ತದೆ. ಅಧ್ಯಾಯ 8 ರಲ್ಲಿನ "ಭೂಗೋಳ ಪಾಠ"ವು ತರಗತಿಯಲ್ಲಿ ರಾಜಕೀಯದ ಪ್ರಸ್ತುತತೆ ಮತ್ತು ಪ್ರಜ್ಞಾವಂತ ಪೌರತ್ವವನ್ನು ರೂಪಸಿಸುವುದು ಏನು ಎಂಬುದರ ಬಗ್ಗೆ  ಪ್ರಶ್ನೆಗಳನ್ನು ಎತ್ತುತ್ತದೆ.

ಆಧುನೀಕರಣದಲ್ಲಿ ಶಾಲೆಯ ಪಾತ್ರವು ಶಾಲಾಶಿಕ್ಷಣದ ಸಾಂಸ್ಕೃತಿಕ ಮತ್ತು ರಾಜಕೀಯ ಕಾರ್ಯಗಳೆರಡಕ್ಕೂ ನಿಕಟ ಸಂಬಂಧ ಹೊಂದಿದೆ. ಅದು ಫಲಕಾರಿತ್ವದ ಅವಶ್ಯಕತೆಗಳನ್ನು ಪೂರೈಸಲು, ಉತ್ಪಾದನಾ ಪ್ರಕ್ರಿಯೆ (ಮತ್ತು ಸ್ವಲ್ಪಮಟ್ಟಿಗೆ ಬಳಕೆ)ಯನ್ನು ವ್ಯವಸ್ಥಿತಗೊಳಿಸಲಾದ ಅಧಿಕಾರಶಾಹಿ ಮತ್ತು ವ್ಯಕ್ತಿ ಸ್ವಾಂತ್ರ್ಯದ ಜೀವನಶೈಲಿಯ ಬೆಳವಣಿಗೆಯನ್ನು ಸೂಚಿಸುತ್ತದೆ. ಸಮಕಾಲೀನ ವಿದ್ವಾಂಸರು ಮತ್ತು ಸಮಾಜ ಸುಧಾರಕರು ಆಧುನೀಕರಣ ಎಂಬ ಪದವನ್ನು ಬಳಸಿದಾಗ, ಅದು ಸಾಮಾನ್ಯವಾಗಿ ಒಂದು ಕೈಗರಿಕಾಪೂರ್ವ ಸಮಾಜದಲ್ಲಿ ನಡೆಯುವ ಕೃಷಿ, ಕೈಗಾರಿಕೆ ಮತ್ತು ತಂತ್ರಜ್ಞಾನ ಅಭಿವೃದ್ಧಿಯ ಪ್ರಕ್ರಿಯೆಯ ರೀತಿಯು ಪಶ್ಚಿಮ ಯುರೋಪ್ ಮತ್ತು ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಕೈಗಾರಿಕಾ ಕ್ರಾಂತಿ ಸಮಯದಲ್ಲಿ ಮತ್ತು ತದನಂತರ ನಡೆದ ಅಭಿವೃದ್ಧಿ ಪ್ರಕ್ರಿಯೆಯನ್ನು ಹೋಲುವುದನ್ನು ಸೂಚಿಸಲು ಬಳಸುವ ಪದ ಎಂದರ್ಥ. ಕೃಷಿ ಮತ್ತು ಉತ್ಪಾದನಾ ಕ್ಷೇತ್ರ ಎರಡರಲ್ಲಿನ ಆರ್ಥಿಕ ಬೆಳವಣಿಗೆಯು ಸ್ವಲ್ಪ ಮಟ್ಟದ ಕೇಂದ್ರೀಕೃತ ಯೋಜನೆ, ಅರ್ಹತೆ ಆಧಾರಿತ ಪ್ರತಿಫಲ ವ್ಯವಸ್ಥೆಯ ಪರಿಚಯ, ಮತ್ತು ರಾಷ್ಟ್ರೀಯ ಅಧಿಕಾರಶಾಹಿ ಬೆಳವಣಿಗೆಯೂ ಸೇರಿದಂತೆ ಮಾರುಕಟ್ಟೆ ಆರ್ಥಿಕತೆಯ ಬೆಳವಣಿಗೆಯನ್ನು ಅವಲಂಬಿಸುತ್ತದೆ ಎಂದು ಆಧುನೀಕರಣದ ಸಿದ್ಧಾಂತಿಗಳು ನಂಬುತ್ತಾರೆ.

ಆಧುನೀಕರಣದ ಸಿದ್ಧಾಂತವು, "ಮಾನವ ಬಂಡವಾಳ ಸಂಪನ್ಮೂಲ" ದ ಅಭಿವೃದ್ಧಿಯ ಮಹತ್ವಕ್ಕೂ ಸಹ ಪ್ರಾಮುಖ್ಯತೆ ನೀಡಿದೆ. ಈ ಒತ್ತು ಶಿಕ್ಷಣತಜ್ಞರಿಗೆ ವಿಶೇಷ ಮಹತ್ವ ಹೊಂದಿದೆ. ಕೈಗಾರಿಕೀಕರಣದೆಡೆಗಿನ ಚಲನೆ ಪರಿಣಾಮಕಾರಿಯಾಗಿರಬೇಕೆಂದರೆ, ಆಗ ಕೇವಲ ಯಂತ್ರೋಪಕರಣಗಳು ಮತ್ತು ಮೂಲಭೂತ ಸೌಕರ್ಯಗಳ ಮೇಲೆ ಬಂಡವಾಳ ಹೂಡಿಕೆ ಇದ್ದರೆ ಮಾತ್ರ ಸಾಲದು, ಅದೇ ರೀತಿಯಲ್ಲಿ ಮಾನವ ಕೌಶಲಗಳ ಅಭಿವೃದ್ಧಿಯ ಮೇಲೆ ಕೂಡ ಬಂಡವಾಳ ಹೂಡಿಕೆ ಇರಬೇಕು ಎನ್ನುವುದೇ ಇದರ ಹಿಂದಿರುವ ವಿಚಾರ. ಇನ್ನೊಂದರ್ಥದಲ್ಲಿ

ಹೇಳುವುದಾದರೆ, ವ್ಯಾಪಕವಾಗಿ ಸಮಾಜದಲ್ಲಿ ಶಿಕ್ಷಣಕ್ಕೆ ಆರ್ಥಿಕ ಮೌಲ್ಯವಿದೆ ಮತ್ತು ಆಧುನೀಕರಣ ಪ್ರಕ್ರಿಯೆಯ ದೊಡ್ಡ ಭಾಗವು ನವೀನ ತಂತ್ರಜ್ಞಾನಗಳನ್ನು ಪರಿಣಾಮಕಾರಿಯಾಗಿ ಬಳಸಲು ಸಮರ್ಥರಾಗಬೇಕು ಎನ್ನುವ ಕಾರಣಕ್ಕೆ ಹೊಸ ಪ್ರತಿಭೆಯನ್ನು ಗುರುತಿಸುವುದನ್ನು ಮತ್ತು ತರಬೇತುಗೊಳಿಸುವುದನ್ನು ಒಳಗೊಂಡಿದೆ.[8]

ತಾಂತ್ರಿಕವಾಗಿ ಅಭಿವೃದ್ಧಿ ಹೊಂದಿದ ಹಾಗೆಯೇ ಇನ್ನೂ ಅಭಿವೃದ್ಧಿ ಹೊಂದುತ್ತಿರುವ ಸಮಾಜ ಎರಡರಲ್ಲಿಯೂ ಮಾನವ ಬಂಡವಾಳ ಸಂಪನ್ಮೂಲದ ಅಭಿವೃದ್ಧಿಯನ್ನು ಪ್ರಮುಖ ಅಂಶವಾಗಿ ಪರಿಗಣಿಸಲಾಗುತ್ತದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಅದನ್ನು ಹಿಂದಿನ ತಲೆಮಾರುಗಳು ಸೃಷ್ಟಿಸಿದ ಸಾಮಾಜಿಕ ಸಂಪತ್ತನ್ನು ಉಳಿಸಿಕೊಳ್ಳುತ್ತಲೇ ಉತ್ಪಾದನಾ ಪ್ರಕ್ರಿಯೆಗೆ ಅಲ್ಪಸಂಖ್ಯಾತ ಜನಸಮುದಾಯಗಳಿಂದ ಪ್ರತಿಭಾವಂತರನ್ನು ಕರೆತಂದು, ಆರ್ಥಿಕ ಅಭಿವೃದ್ಧಿಯ ವೇಗವನ್ನು ಹೆಚ್ಚಿಸುವ ವಿಧಾನವನ್ನಾಗಿ ಪರಿಗಣಿಸಲಾಗುತ್ತದೆ. ವಾಸ್ತವವಾಗಿ, ಕೆಲವು ಸಂದರ್ಭಗಳಲ್ಲಿ ಮಾನವ ಬಂಡವಾಳ ಸಂಪನ್ಮೂಲ ಪ್ರತಿಪಾದಕರು, ಈ ಹಿಂದೆ ಶೈಕ್ಷಣಿಕ ಪ್ರಕ್ರಿಯೆಯ ಭಾಗವಾಗಿರುವ ಅವಕಾಶದಿಂದ ವಂಚಿತರಾದ ಗುಂಪುಗಳಿಗೆ ಹೆಚ್ಚು ಶೈಕ್ಷಣಿಕ ಸಂಪನ್ಮೂಲಗಳನ್ನು ವಿನಿಯೋಗಿಸುವುದರಿಂದ ಅತಿ ಹೆಚ್ಚಿನ ಲಾಭವನ್ನು ಪಡೆಯಬಹುದು ಎಂದು ವಾದಿಸಿರುವುದಿದೆ. ಕೆಲವು ಸಂದರ್ಭಗಳಲ್ಲಿ, ಈಗಾಗಲೇ ಸುಶಿಕ್ಷಿತವಾದ ಬಹುಸಂಖ್ಯಾತ ಸಮುದಾಯದ ಶಿಕ್ಷಣದ ಮೇಲೆ ಹೆಚ್ಚಿನ ಸಂಪನ್ಮೂಲ ವಿನಿಯೋಗ ಮಾಡುವುದಕ್ಕಿಂತ ಸಾಧನೆಯ ಮಟ್ಟ ಕಡಮೆ ಇರುವ ಅಲ್ಪಸಂಖ್ಯಾತ ಗುಂಪುಗಳ ಶಿಕ್ಷಣಕ್ಕೆ ಹೆಚ್ಚಿನ ಸಂಪನ್ಮೂಲ ವಿನಿಯೋಗ ಮಾಡುವುದರಿಂದ ಸಮಾಜದ ಒಟ್ಟು ಸಂಪನ್ಮೂಲಕ್ಕೆ ಹೆಚ್ಚಿನ ಕೊಡುಗೆಯನ್ನು ನೀಡಿದಂತಾಗುತ್ತದೆ. ಈ ಸಂದರ್ಭಗಳಲ್ಲಿ ಮಾನವ ಬಂಡವಾಳ ಸಂಪನ್ಮೂಲ ಸಿದ್ಧಾಂತವು ಹೆಚ್ಚು ಪ್ರಾತಿನಿಧ್ಯ ಇರದ ಅಲ್ಪಸಂಖ್ಯಾತರಿಗೆ ಶೈಕ್ಷಣಿಕ ಅವಕಾಶಗಳನ್ನು ಒದಗಿಸಲು ಬಲವಾದ ವಾದಗಳನ್ನು ಮುಂದಿಟ್ಟಿದೆ.

ತಾಂತ್ರಿಕವಾಗಿ ಇನ್ನೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ, ವಿವಿಧ ಔದ್ಯೋಗಿಕ ಹಂತಗಳಲ್ಲಿ ಸಮಾಜಕ್ಕೆ ಬೇಕಾಗುವ "ಮಾನವ ಶಕ್ತಿ"ಯ ಅಗತ್ಯಗಳನ್ನು ಪೂರೈಸಲು ಮಾನವ ಬಂಡವಾಳ ಸಂಪನ್ಮೂಲದ ಅಭಿವೃದ್ಧಿಯು ಅತ್ಯಾವಶ್ಯಕ ಎಂದು ಪರಿಗಣಿಸಲಾಗುತ್ತದೆ. ಸಂದರ್ಭಕ್ಕೆ ಅನುಗುಣವಾಗಿ, ಸಮಂಜಸವೆನಿಸುವ ಹಲವು ವಿಭಿನ್ನ ರೀತಿಯ ಆಯ್ಕೆಗಳಿವೆ. ಉದಾಹರಣೆಗೆ, ದತ್ತ ಸಂಪನ್ಮೂಲದ ಕೊರತೆ ಇರುವ ಸಂದರ್ಭದಲ್ಲಿ, "ಮಾನವ ಶಕ್ತಿ"ಯ ಯೋಜಕರು (ಅಭಿವೃದ್ಧಿ ಮತ್ತು ಹಂಚಿಕೆಯ ಜವಾಬ್ದಾರಿ ವಹಿಸಿಕೊಂಡವರು), ಉನ್ನತ ಶಿಕ್ಷಣದ ಅವಶ್ಯಕತೆ ಇರುವ ಕೆಲವೇ ಸ್ಥಾನಗಳಿಗೆ ಮಾತ್ರ ತರಬೇತಿಗೆ ಸಂಪನ್ಮೂಲಗಳನ್ನು ಒದಗಿಸಿ, ಅತಿ ಹೆಚ್ಚಿನ ಶೈಕ್ಷಣಿಕ ಸಂಪನ್ಮೂಲಗಳನ್ನು ವಿಶಾಲ ಮಟ್ಟದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಣದ ಅಭಿವೃದ್ಧಿಗೆ ಒದಗಿಸಲು ನಿರ್ಧರಿಸಬಹುದು. ಕೆಲವು ಸಂದರ್ಭಗಳಲ್ಲಿ, ರಾಷ್ಟ್ರದ ವೃತ್ತಿಪರ ಮತ್ತು ತಾಂತ್ರಿಕ ಮೇಲ್ವರ್ಗವನ್ನು ದೇಶದ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ತರಬೇತುಗೊಳಿಸಿ, ದೇಶದೊಳಗಿನ ಬಹುತೇಕ ಶೈಕ್ಷಣಿಕ ಸಂಪನ್ಮೂಲಗಳನ್ನು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ವಿನಿಯೋಗಿಸುವುದರಿಂದ ಖರ್ಚು ಕಡಮೆಯಾಗಬಹುದು. ನಿರ್ದಿಷ್ಟ ವ್ಯವಸ್ಥೆ ಏನೇ ಇದ್ದರೂ, ಇಲ್ಲಿರುವ ಮೂಲಭೂತ ವಿಚಾರ ಎಂದರೆ, ಶಾಲಾ ಶಿಕ್ಷಣ ವ್ಯವಸ್ಥೆಯ ಅಭಿವೃದ್ಧಿಯು ಕಾರ್ಯಪಡೆಯ ಒಟ್ಟಂದದ ಅಗತ್ಯತೆಗಳಿಂದ ನಿರ್ದೇಶಿಸಲ್ಪಡಬೇಕು ಮತ್ತು ಅವುಗಳಿಗೆ ಸಂಬಂಧಿಸಿದಂತೆ ಕಾರ್ಯಾತ್ಮಕವಾಗಿರಬೇಕು ಎಂಬುದು.

ಈ ಅಧ್ಯಾಯದಲ್ಲಿ, ನಾವು ಕಾರ್ಯಾತ್ಮಕವಾದಿಗಳು ಸಮಾಜಕ್ಕೆ ಸಂಬಂಧಿಸಿದಂತೆ ಶಾಲೆಯನ್ನು ಅರ್ಥೈಸಿಕೊಳ್ಳುವ ಮತ್ತು ಪರಿಗಣಿಸುವ ವಿಧಾನವನ್ನು ವಿವರಿಸಿದ್ದೇವೆ. ಕಾರ್ಯಾತ್ಮಕವಾದಿಗಳು ಸಮಾಜವನ್ನು ಬದುಕುಳಿಯುವಿಕೆಗೆ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಮತ್ತು ತಮ್ಮ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ವಿವಿಧ ಭಾಗಗಳು ಸಮಗ್ರ ರೀತಿಯಲ್ಲಿ ವಿಕಸನಗೊಂಡ ಜೈವಿಕ ಜೀವಿಗೆ ಹೋಲಿಸಿ ನೋಡುತ್ತಾರೆ. ಕಾರ್ಯಾತ್ಮಕವಾದಿಗಳು ಈ ಸಾಮ್ಯತೆಯನ್ನು ಬಳಸಿ, ಶಾಲೆಗಳು ಆಧುನಿಕ ಸಮಾಜದ ಕೆಲವು ಅತ್ಯಗತ್ಯತೆಗಳನ್ನು ಪೂರೈಸಲು ನೆರವಾಗುತ್ತದೆ ಎಂದು ವಾದಿಸುತ್ತಾರೆ. ಆದಾಗ್ಯೂ, ಸಮಾಜ ಮತ್ತು ಜೈವಿಕ

ಕಾರ್ಯಾತ್ಮಕವಾದದ ನಡುವೆ ಒಂದು ಪ್ರಮುಖ ವ್ಯತ್ಯಾಸ ಇದೆ. ಜೀವಿಗಳಿಗೆ ಸುಲಭವಾಗಿ ತಮ್ಮ ಅಂಗಾಂಗಗಳನ್ನು ಬದಲಾಯಿಸಿಕೊಳ್ಳುವುದಾಗಲೀ ಅಥವಾ ತಮ್ಮ ಜನ್ಮಸಿದ್ಧ ವರ್ತನೆಗಳನ್ನು ಮಾರ್ಪಡಿಸಿಕೊಳ್ಳುವುದಾಗಲೀ ಆಗುವುದಿಲ್ಲ. ಆದರೆ ಸಮಾಜಗಳು ಮತ್ತು ಶಾಲೆಗಳು ಬದಲಾಗಬಲ್ಲವು ಮತ್ತು ಬದಲಾಗುತ್ತವೆ, ಕೆಲವೊಮ್ಮೆ ಶೀಘ್ರವಾಗಿ ಮತ್ತು ಆಮೂಲಾಗ್ರವಾಗಿ. ಕೆಲವು ಬದಲಾವಣೆಗಳು ಸುತ್ತ ನಡೆಯುವ ಘಟನೆಗಳಿಂದ ಪ್ರಭಾವಿತವಾಗಿ ಸಂಭವಿಸುತ್ತವೆಯಾದರೂ ಇತರ ಬದಲಾವಣೆಗಳು ಪ್ರಜ್ಞಾಪೂರ್ವಕವಾಗಿ ಉದ್ದೇಶಿತದ್ದಾಗಿರುತ್ತವೆ. ಕಾರ್ಯಾತ್ಮಕವಾದವು ಸಮಾಜದ ಗ್ರಹಿಸಿದ ಅಗತ್ಯಗಳನ್ನು ಮತ್ತು ಉದ್ದೇಶಗಳನ್ನು ಪೂರೈಸುವ ಸಲುವಾಗಿ ಶಾಲೆಗಳ ರಚನೆ, ಸಂಘಟನೆ ಮತ್ತು ಸುಧಾರಣೆಗಳ ಕುರಿತು ಯೋಚಿಸಲು ಒಂದು ವಿಧಾನವನ್ನು ಒದಗಿಸುತ್ತದೆ. ಆದರೆ ಇದನ್ನು ಮಾಡಿದಾಗ, ಸಾಮಾಜಿಕ ಗುರಿಗಳನ್ನು ಸಾಧಿಸಲು ಜನರನ್ನು ಕುಶಲೋಪಾಯವಾಗಿ ಬಳಸುವ ವಿಚಾರ ಕೆಲವರಿಗೆ ಸರಿ ಕಾಣಿಸುವುದಿಲ್ಲ. ಶಾಲಾ ಶಿಕ್ಷಣವನ್ನು ಆಳುವ ವರ್ಗದ ಒಂದು ರೀತಿಯ ಹತೋಟಿಯ ಅಸ್ತ್ರ ಎಂದು ಪರಿಗಣಿಸುವ ಸಂಘರ್ಷ ಸಿದ್ಧಾಂತಿಗಳ ಪರಿಚಯವನ್ನು ನಾವು ಮಾಡುವ ಮೊದಲು, ಮುಂದಿನ ಅಧ್ಯಾಯದಲ್ಲಿ ಕಾರ್ಯಾತ್ಮಕವಾದದ ಬಗ್ಗೆ ಇರುವ ಕೆಲವು ವಿಮರ್ಶೆಗಳನ್ನು ಮತ್ತು ಅದರಲ್ಲಿನ ಸಮಸ್ಯೆಗಳನ್ನು ಪರಿಶೀಲಿಸೋಣ. ಆದಾಗ್ಯೂ, ಈ ಹಂತದಲ್ಲಿ, ನೀವು ಅಧ್ಯಾಯ 8ರಲ್ಲಿ ಪ್ರಸ್ತಾಪಿಸಿರುವ "ಸಂಪನ್ಮೂಲ ಹಂಚಿಕೆ" ಯನ್ನು ಪರಿಗಣಿಸಲು ಬಯಸಬಹುದು. ಆ ವಿಷಯವು ಈ ಅಧ್ಯಾಯದಲ್ಲಿ ಪರಿಗಣಿಸಲಾಗಿರುವ ವಿಚಾರಗಳನ್ನು ಹೆಚ್ಚು ಆಳವಾಗಿ ಪರಿಶೀಲಿಸುತ್ತದೆ ಮತ್ತು ಸಾಮಾಜಿಕ ಅಗತ್ಯಗಳು ಮತ್ತು ಸಾಮಾಜಿಕ ನ್ಯಾಯದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತುತ್ತದೆ.